www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–12 ಸಂಚಿಕೆ–10 ಡಿಸೆಂಬರ್ 2014
Volume : XII Issue : X December 2014

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**

Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ನಿನ್ನ ತಂದೆ ತಾಯಿಯವರನ್ನು ಸನ್ಮಾನಿಸು
3. ನಿನ್ನ ಹೆಬ್ಬಯಕೆ ಏನು?
4. ಆರೋಗ್ಯ ಸ್ವರ
5. ನೀತಿವಂತನ ಆಶೀರ್ವಾದಗಳು
6. ಶರೀರ – ಆತ್ಮ
7. ಸ್ಥಳೀಯ ಮತ್ತು ವಿದೇಶ ಸುದ್ದಿ
8. ಮಹಿಳೆಯರ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸು ಕ್ರಿಸ್ತನ ಅತೀ ಪರಿಶುದ್ಧ ನಾಮದಲ್ಲಿ ದೇವರ ಸ್ವರ ವಾಚಕರೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು.

ಪ್ರಿಯರೇ ನಾವು ಈಗಾಗಲೇ ಈ ವರ್ಷದ ಅಂತ್ಯಕ್ಕೆ ಬಂದಿರುತ್ತೇವೆ. ಈ ವರ್ಷವನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯ ಮೂಲಕ ಕಳೆಯುವಂತೆ ಆತನು ನಮಗೆ ತೋರಿಸಿದ ಪ್ರೀತಿಗಾಗಿ ನಾವು ತಂದೆಯಾದ ದೇವರಿಗೆ ಸ್ತೋತ್ರವನ್ನು ಸಲ್ಲಿಸುವವರಾಗಬೇಕು. ಪ್ರಲಾಪ 3:22,23 ವಾಕ್ಯದ ಪ್ರಕಾರವಾಗಿ, ನಾವು ಉಳಿದಿರುವದು ಯೆಹೋವನ ಕರುಣೆಯೇ; ಆತನ ಕೃಪಾವರಗಳು ನಿಂತುಹೋಗವು, ದಿನದಿನವು ಹೊಸಹೊಸದಾಗಿ ಒದಗುತ್ತದೆ; ನಿನ್ನ ಸತ್ಯಸಂಧತೆಯು ದೊಡ್ಡದು".

ಆತನ ಪ್ರೀತಿಯು, ಆತನ ಕೃಪೆಯೂ, ಆತನ ಸತ್ಯತೆಯೂ ನಮ್ಮನ್ನು ಆತನ ಸೇವೆ ಮಾಡುವಂತೆ ಪ್ರೋತ್ಸಾಹಿಸಿ ಇದುವರೆಗೂ ನಡೆಸುತ್ತಾ ಬಂದಿದೆ ಅದಕ್ಕಾಗಿ ನಾವು ದೇವರಿಗೆ ಸ್ತೋತ್ರ ಮಾಡೋಣ.

ದೇವರ ಕೃಪಾ ಹಸ್ತ ಮತ್ತು ಆತನ ದಯೆ ಹಾಗೂ ಪ್ರಿಯ ವಾಚಕರಾದ ನಿಮ್ಮೆಲ್ಲರ ಸಹಾಯ, ಪ್ರೋತ್ಸಾಹ, ಸಹಕಾರ ಮತ್ತು ಪ್ರಾರ್ಥನೆಯ ಬೆಂಬಲವನ್ನು ನೀಡಿದ್ದೀರಿ ಹಾಗೂ ಇನ್ನು ಮುಂದೆಯು ನೀಡುವಿರಿ ಎಂದು ಎದುರು ನೋಡುವವರಾಗಿದ್ದೇವೆ. ಇದುವರೆಗೂ ದೇವರು ನಮ್ಮನ್ನು ಈ ಸೇವೆಯಲ್ಲಿ ಮಾತ್ರವಲ್ಲದೆ ದೇವರಸ್ವರ ಮಾಸಪತ್ರಿಕೆಯನ್ನು ಯಶಸ್ವಿಯಾಗಿ ನಡೆಸುವಂತೆ ಕೃಪೆ ಮಾಡಿದನು ಮತ್ತು ಈ ಮಾಸ ಪತ್ರಿಕೆಯಿಂದ ಅನೇಕರನ್ನು ದೇವರು ಆಶೀರ್ವದಿಸಿದ್ದಾನೆ ಮತ್ತು ಅವರೊಂದಿಗೆ ವಾಕ್ಯದ ಮೂಲಕ ಮಾತನಾಡಿದ್ದಾನೆಂದು ಕೇಳಿ ನಮಗೆ ತುಂಬಾ ಸಂತೋಷವಾಯಿತು. ಯಾಕಂದರೆ ದೇವರ ವಾಕ್ಯವು ನಮ್ಮೊಳಗೆ ಕಾರ್ಯಮಾಡುವಂತಹದ್ದು, ಬಿದ್ದವರನ್ನು ಮೇಲಕ್ಕೆತ್ತುವಂತಹದ್ದು, ಬಲಹೀನರಿಗೆ ಬಲನೀಡುವಂತಹದ್ದು ಆಗಿದೆ. "ಸೋತವರಿಗೆ ತ್ರಾಣವನ್ನು ಅನುಗ್ರಹಿಸಿ ನಿರ್ಬಲನಿಗೆ ಬಹು ಬಲವನ್ನು ದಯಪಾಲಿಸುತ್ತಾನೆ." (ಯೆಶಾ 40:29). "ಯಾಕಂದರೆ ದೇವರ ವಾಕ್ಯವು ಸಜ್ಜೀವವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥಹದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ." (ಇಬ್ರಿಯ 4:12) ಅದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ. ಆದದರಿಂದ ಪ್ರಿಯ ವಾಚಕರೇ ದೇವರ ವಾಕ್ಯದ ಮುಂದೆ ನಮ್ಮನ್ನು ತಗ್ಗಿಸಿಕೊಂಡು ನಮ್ಮ ಜೀವಿತವನ್ನು ಒಪ್ಪಿಸಿಕೊಡುವುದಾದರೆ ಆತನು ನಮ್ಮನ್ನು ನಡೆಸುವವನಾಗಿರುತ್ತಾನೆ.

ಈ ವರ್ಷವಿಡೀ ಅನೇಕ ತಿರ್ಮಾನಗಳನ್ನು ತೆಗೆದುಕೊಂಡು ಸೋತು ಹೋಗಿರುವುದಾದರೆ, ನಿನ್ನ ತೀರ್ಮಾನದಲ್ಲಿ ನಿನಗೆ ನಿಲ್ಲಲು ಸಾಧ್ಯವಾಗದಿದ್ದರೆ ಈ ಸಮಯದಲ್ಲಿ ನಿನ್ನ ಹೃದಯವನ್ನು ದೇವರ ಮುಂದೆ ಬಿಚ್ಚಿ ನೀನು ಕೇಳುವದಾದರೆ ಆತನು ಖಂಡಿತವಾಗಿ ಕಾರ್ಯಮಾಡುತ್ತಾನೆ (ಕೀರ್ತ 62:8). ಕರ್ತನಾದ ಯೇಸು ಕ್ರಿಸ್ತನ್ನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) **ಆದಿಕಾಂಡ** :– ಲೋಕವು ಶಿಲ್ಪಿಯಾದ ದೇವರ ಕೈಯಿಂದ ಸೃಷ್ಟಿಸಲ್ಪಟ್ಟಿತು ಎಂದು ಕಾಣುತ್ತೇವೆ.

2) **ವಿಮೋಚನಾಕಾಂಡ**:– ಐಗುಪ್ತದ ದಾಸತ್ವದಿಂದ ಬಿಡುಗಡೆ ಹೊಂದಿದ ಇಸ್ರಾಯೇಲ್ಯರು ವಾಗ್ದಾತ್ತ ದೇಶವಾದ ಕಾನಾನ ದೇಶದ ಕಡೆಗೆ ನಡೆಯುವುದನ್ನು ಕಾಣಬಹುದು.

3) **ಯಾಜಕಕಾಂಡ** :– ದೇವ ಜನರು ದೇವರ ಮಾರ್ಗದಲ್ಲಿ ನಡೆಯಲು ಪರಿಶುದ್ಧವಾದ ನ್ಯಾಯವಿಧಿಗಳ ಕುರಿತು ಕಾಣುತ್ತೇವೆ ಮಾತ್ರವಲ್ಲದೆ 6 ವಿಧವಾದ ಯಜ್ಞಗಳ ಕುರಿತು ಓದುತ್ತೇವೆ.

4) **ಅರಣ್ಯಕಾಂಡ** :– ಇದು ವಂಶಾವಳಿಗಳ ಪುಸ್ತಕವಾಗಿದೆ.

5) **ಧರ್ಮೋಪದೇಶಕಾಂಡ** :– ಶಾಪಕ್ಕೂ ಆಶೀರ್ವಾದಕ್ಕೂ ಇರುವ ವ್ಯತ್ಯಾಸವನ್ನು ಕಾಣುತ್ತೇವೆ.

6) **ಯೆಹೋಶುವ** :– ವಾಗ್ದಾತ್ತ ದೇಶವನ್ನು ವಶಪಡಿಸಿ, ಸ್ಥಿರಪಡುವುದನ್ನು ಕಾಣುತ್ತೇವೆ.

7) **ನ್ಯಾಯಸ್ಥಾಪಕರು** :– ಪದೇ ಪದೇ ದೇವರನ್ನು ಬಿಟ್ಟು ಅವಿಧೇಯರಾದ ಇಸ್ರಾಯೇಲ್ಯರು ದೇವರು ಮುಂತಿಳಿಸಿದಂತ ವೈರಿಗಳ ಕೈಗೆ ಒಪ್ಪಿಸಲ್ಪಡುವುದು, ದೇವರಿಗೆ ಮೊರೆಯಿಟ್ಟಾಗ ಅವರನ್ನು ಬಿಡಿಸಲು ದೇವರು ನ್ಯಾಯಸ್ಥಾಪಕರನ್ನು ಎಬ್ಬಿಸುವುದನ್ನು ಕಾಣಬಹುದು.

8) **ರೂತಳು** :– ದೇವರಿಂದ ದೂರ ಹೋದಾಗ ಬರುವ ಕಷ್ಟಗಳು ದೇವರ ಬಳಿಗೆ ತಿರುಗಿ ಬರುವಾಗ ಹೊಂದುವ ಆಶೀರ್ವಾದಗಳ ಕುರಿತು ಓದುತ್ತೇವೆ.

9) **1 ಸಮುವೇಲ** :– ಇಸ್ರಾಯೇಲರ ಪ್ರಥಮ ಅರಸನಾದ ಸೌಲನ ಬೀಳ್ಚಿಕೆ ಮತ್ತು ದೇವರಿಂದ ಕೈಬಿಡಲ್ಪಡುವಿಕೆ ಹಾಗೂ ದಾವೀದನ ಅಭಿಷೇಕ.

10) **2 ಸಮುವೇಲ** :– ದಾವೀದನ ಸ್ಥಿರಪಡುವಿಕೆ ಮತ್ತು ಬೀಳ್ಚಿಕೆ, ಮಾನಸಾಂತರ ಪಟ್ಟಾಗ ದೇವರಿಂದ ಆಶೀರ್ವದಿಸಲ್ಪಡುವಿಕೆಯನ್ನು ಕಾಣಬಹುದು.

11) **1 ಅರಸುಗಳು** :– ಇಸ್ರಾಯೇಲರ ಗೋತ್ರಗಳಲ್ಲಿ ಇಬ್ಭಾಗವನ್ನು ಕಾಣಬಹುದು.

12) **2ನೇ ಅರಸುಗಳು** :– ಎಲೀಷನ ಸೇವೆ

13) **1 ಪೂರ್ವಕಾಲ ವೃತ್ತಾಂತ** :– ಅರಸನಾದ ದಾವೀದನ ಚರಿತ್ರೆ

14) **2 ಪೂರ್ವಕಾಲ ವೃತ್ತಾಂತ** :– ಬಾಬೆಲಿನ ಸೆರೆವಾಸ.

15) **ಎಜ್ರನು** :– ಎಜ್ರನು ಕೆಲವರನ್ನು ಸೆರೆಯಿಂದ ಕರತಂದನು.

16) **ನೆಹೆಮೀಯನು** :– ಯೆರುಸಲೇಮಿನ ಕೋಟೆಯನ್ನು ಕಟ್ಟಿಸಿದನು.

17) **ಎಸ್ತೇರಳು** :– ಯೆಹೂದ್ಯರನ್ನು ದುಷ್ಟ ಹಾಮಾನನಿಂದ ಕಾಪಾಡಿದ ಎಸ್ತೇರಳು ಯೆಹೂದ್ಯನಾದ ಮೊರ್ದೆಕೈಯನ್ನು ಮೇಲಕ್ಕೆತ್ತಿದ ದೇವರು.

18) **ಯೋಬನು** :– ಯೋಬನು ಎಲ್ಲವನ್ನು ಕಳಕೊಂಡರೂ ಕಷ್ಟ ಕಾಲದಲ್ಲಿ ದೇವರಲ್ಲಿದ್ದ ದೃಢವಾದ ನಂಬಿಕೆಯ ಮೂಲಕ ದೇವರಿಂದ ಎರಡರಷ್ಟು ಆಶೀರ್ವಾದಿಸಲ್ಪಟ್ಟದ್ದು.

19) **ಕೀರ್ತನೆಗಳು** :– 1ನೇ ಕೀರ್ತನೆ ದೇವರ ವಾಕ್ಯಧ್ಯಾನದಿಂದ ಆರಂಭಿಸಿ 150ನೇ ಕೀರ್ತನೆ ಸ್ತುತಿಯಿಂದ ಮುಗಿಸುವಂತದ್ದನ್ನು ಕಾಣಬಹುದು.

20) **ಜ್ಞಾನೋಕ್ತಿಗಳು** :– ಜೀವಿತದ ಪ್ರತಿಯೊಂದು ಭಾಗದಲ್ಲಿ ಎಚ್ಚರಿಕೆ, ಮಾರ್ಗದರ್ಶನ, ನಂಬಿಕೆ, ನಿರೀಕ್ಷೆ, ಪರಿಶುದ್ಧತೆ, ಬುದ್ಧಿವಾದಗಳನ್ನು ಉಂಟುಮಾಡುವ ವಚನದ ಮಾತುಗಳು.

21) **ಪ್ರಸಂಗಿ** :– ಈ ಲೋಕವು ನಶ್ವರ ನಿತ್ಯವಾದ ಜೀವಿತ ಶಾಶ್ವತ.

22) **ಪರಮಗೀತೆ** :– ತೋಟದಲ್ಲಿರುವ ಸುಗಂಧ

23) **ಯೆಶಾಯ** :– ರಕ್ಷಕನಾದ ಯೇಸುಕ್ರಿಸ್ತನ ಜನನ, ಮರಣ, ಪುನರುತ್ಥಾನವೂ, ನೂತನ ಭೂಮಿ, ನೂತನ ಆಕಾಶ.

24) **ಯೆರೆಮೀಯ** :– ಭ್ರಷ್ಟಚಾರ ತುಂಬಿದ ಇಸ್ರಾಯೇಲ ಸಂತತಿ.

25) **ಪ್ರಲಾಪ** :– ಇಸ್ರಾಯೇಲಿನ ಸೋಲಿನ ಮತ್ತು ನೋವಿನ ಕೂಗು.

26) **ಯೆಹೆಜ್ಕೇಲ** :– ದೇವರ ಹಸ್ತದ ಮಹತ್ವ

27) **ದಾನಿಯೇಲ** :– ಲೋಕದ 7 ಸಾಮ್ರಾಜ್ಯಗಳು.

28) **ಹೋಶೇಯ** :– ದೇವರ ನ್ಯಾಯತೀರ್ಪು ದೇವರ ಕರುಣೆ.

29) **ಯೋವೇಲ** :– ಕಡೆಕಾಲದಲ್ಲಿ ಸುರಿಸಲ್ಪಡಲಿಕ್ಕಿರುವ ಪರಿಶುದ್ಧಾತ್ಮನ ವಾಗ್ದಾನ

30) **ಆಮೋಸ** :– ಕುರುಬನು ಪ್ರವಾದಿಯಾದದ್ದು.

31) **ಓಬದ್ಯ** :– ಎದೋಮಿನ ನಾಶನ

32) **ಯೋನ** :– ಪುನರುತ್ಥಾನ ಹೊಂದಿದ ಯೇಸುಕ್ರಿಸ್ತನ ಛಾಯೆ

33) **ಮೀಕ** :– ಯೆಹೂದ್ಯರ ಪುನರ್‌ಸ್ಥಾಪನೆ

ನಾನು ನಿತ್ಯ ಶ್ರೇಷ್ಠತೆಯನ್ನು ದಯಪಾಲಿಸಿ ನಿನ್ನನ್ನು ತಲಾಂತರಗಳವರೆಗೆ ಉಲ್ಲಾಸಕರವಾಗುವಂತೆ ಮಾಡುವೆನು (ಯೆಶಾ. 60:15).

34) **ನಹೂಮ** :– ನಿನವೆಗೆ ನ್ಯಾಯತೀರ್ಪಿನ ಸಾಕ್ಷಿ

35) **ಹಬಕ್ಕೂಕ** :_ ದರ್ಶನ ಮತ್ತು ಕಸ್ದೀಯರ ಅಂತ್ಯ.

36) **ಚೆಫನ್ಯ** :– ಯೆಹೂದ್ಯರನ್ನು ಕೂಗಿ ಕರೆಯುವ ಬೆಳಕು

37) **ಹಗ್ಗಾಯ** :– ವಿಧೇಯತೆ ಮತ್ತು ಅವಿಧೇಯತೆಯ ವ್ಯತ್ಯಾಸ

38) **ಜೆಕರ್ಯ** :– ಕರ್ತನ ಎರಡನೇಯ ಬರೋಣ

39) **ಮಲಾಕಿಯ** :– ಹಳೆ ಒಡಂಬಡಿಕೆಯ ಕೊನೆಯ ಪ್ರವಾದಿಯ ಪ್ರವಾದನೆ.

### ಹೊಸ ಒಡಂಬಡಿಕೆ

1) **ಮತ್ತಾಯ** :– ಯೇಸು ರಾಜನು

2) **ಮಾರ್ಕ** :– ಯೇಸು ದಾಸನು (ಸೇವಕನು)

3) **ಲೂಕ** :– ಯೇಸು ಮನುಷ್ಯ ಕುಮಾರ

4) **ಯೋಹಾನ** :– ಯೇಸು ದೇವಕುಮಾರ

5) **ಅಪೋಸ್ತಲರ ಕೃತ್ಯ** :– ಹೊಸ ಒಡಂಬಡಿಕೆಯ ಸಭೆಯ ಜನನ

6) **ರೋಮಪುರದ ಪತ್ರಿಕೆ** :– ಮನುಷ್ಯನು ಕೃಪೆಯಿಂದ ರಕ್ಷಿಸಲ್ಪಡುವ ವಿಷಯ

7) **1 ಕೊರಿಂಥ** :– ಆತ್ಮೀಕತೆಯಿಂದ ಲೌಕಿಕತೆಗೆ ತಿರುಗುವ ವಿಚಾರ

8) **2 ಕೊರಿಂಥ** :– ನೂತನ ಮನುಷ್ಯ

9) **ಗಲಾತ್ಯ** :– ಧರ್ಮಶಾಸ್ತ್ರದಿಂದ ರಕ್ಷಣೆ ಅಲ್ಲ, ಕೃಪೆಯಿಂದ ರಕ್ಷಣೆ

10) **ಎಫೆಸ** :– ದೇವರ ಆರಿಸುವಿಕೆ

11) **ಫಿಲಿಪ್ಪ** :– ನಂಬಿಕೆಯ ಓಟ

12) **ಕೊಲೊಸ್ಸೆ** :– ಸ್ವರ್ಗದ ಮೇಲೆ ದೃಷ್ಟಿ

13) **1 ಥೆಸಲೋನಿಕ** :– ಕರ್ತನ ಬರೋಣ

14) **2 ಥೆಸಲೋನಿಕ** :– ಕ್ರಿಸ್ತ ವಿರೋಧಿಯ ಆಗಮನ

15) **1 ತಿಮೊಥೆ** :– ಸಭೆಯ ಉಪದೇಶಗಳು

16) **2 ತಿಮೊಥೆ** :– ಸಭೆಯ ಮಾರ್ಗದರ್ಶನ

17) **ತೀತ** :– ಶಿಸ್ತಿನ ಉಪದೇಶಗಳು

18) **ಫಿಲೆಮೋನ** :– ಕ್ರಿಸ್ತನ ಪ್ರೀತಿ

19) ಇಬ್ರಿಯರಿಗೆ ಬರೆದ ಪತ್ರಿಕೆ :– ಪ್ರಕಟವಾದ ದೇವರ ಸನ್ನಿಧಾನ

20) **ಯಾಕೋಬ** :– ಕ್ರಿಯೆಯಿಲ್ಲದ ನಂಬಿಕೆ ಸತ್ತನಂಬಿಕೆ

21) **1 ಪೇತ್ರ** :– ಕ್ರಿಸ್ತೀಯ ಜೀವಿತ

22) **2 ಪೇತ್ರ** :– ಸುಳ್ಳು ಬೋಧನೆ

23) **1 ಯೋಹಾನ**:– ದೈವೀಕ ಪ್ರೀತಿ

24) **2 ಯೋಹಾನ** :– ಸುಳ್ಳು ಉಪದೇಶಕರಿಂದ ರಕ್ಷಣೆ

25) **3 ಯೋಹಾನ** :– ಆತ್ಮೀಕ, ಭೌತಿಕ, ಲೌಕಿಕ ಅಭಿವೃದ್ಧಿ

26) **ಯೂದನ ಪತ್ರಿಕೆ** :– ಬುದ್ಧಿವಾದ

27) **ಪ್ರಕಟಣೆ ಪುಸ್ತಕ** :– ನಿತ್ಯತ್ವದ ಪ್ರಕಟಣೆ.

### ದೇವರ ವಾಕ್ಯದ ವಿಶೇಷತೆ

1) ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವು ದಾರಿಗೆ ಬೆಳಕು ಆಗಿದೆ (ಕೀರ್ತ. 119:105).

2) ನನ್ನ ಉಪದೇಶವು ಹಸಿಹುಲ್ಲಿನ ಮೇಲೆ ಮೆಲ್ಲಗೆ ಸುರಿಯುವ ಮಳೆಯ ತುಂತುರುಗಳಂತೆ [ತಣ್ಣಗಿರುವದು;] ನನ್ನ ಬೋಧನೆಯು ಮಂಜಿನಂತೆಯೂ ಕಾಯಿ ಪಲ್ಯಗಳ ಮೇಲೆ ಬೀಳುವ ಹದಮಳೆಯಂತೆಯೂ [ಹಿತವಾಗಿರುವದು] (ಧರ್ಮೋ. 32:2).

3) ನಾನು ಪ್ರವಾದಿಯ ಬಾಯಲ್ಲಿನ ನನ್ನ ಮಾತುಗಳನ್ನು ಬೆಂಕಿಯನ್ನಾಗಿಯೂ ಈ ಜನರನ್ನು ಸೌದೆಯನ್ನಾಗಿಯೂ ಮಾಡುವೆನು, ಅದು ಅವರನ್ನು ತಿಂದುಬಿಡುವದು (ಯೆರೆ. 5:14).

4) ನನ್ನ ವಾಕ್ಯವು ಬೆಂಕಿಗೂ ಬಂಡೆಯನ್ನು ಒಡೆದುಬಿಡುವ ಚಮಟಿಗೆಗೂ ಸಮಾನವಾಗಿದೆಯಲ್ಲಾ. ಯೆಹೋವನೇ ಇದನ್ನು ನುಡಿದಿದ್ದಾನೆ (ಯೆರೆ. 23:29).

5) ಆ ಬಿತ್ತುವವನು ವಾಕ್ಯವೆಂಬ ಬೀಜವನ್ನು ಬಿತ್ತುತ್ತಾನೆ (ಮಾರ್ಕ. 4:14).

6) ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ (ಎಫೆ. 6:17).

7) ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟುಮುಖವನ್ನು ನೋಡಿದ ಮನುಷ್ಯನಂತಿರುವನು (ಯಾಕೋ. 1:23).

8) ಆತನು ತನ್ನ ಸುಚಿತ್ತದ ಪ್ರಕಾರ ಸತ್ಯಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿ ನಾವು ಆತನ ಸೃಷ್ಟಿಗಳಲ್ಲಿ ಪ್ರಥಮಫಲದಂತಾದೆವು (ಯಾಕೋ. 1:18).

9) ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ (ಇಬ್ರಿ. 11:3).

ನಮಗೆ ಸಂಭವಿಸುವ ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ
(2 ಕೊರಿ. 1:3–4).

10) ನಿನ್ನ ವಾಕ್ಯ ವಿವರಣೆಯಿಂದ ಯುಕ್ತಿಹೀನರಿಗೆ ಜ್ಞಾನೋದಯವಾಗುವದು (ಕೀರ್ತ. 119:130).

11) ಆತನು [ದೂತನನ್ನೋ ಎಂಬಂತೆ] ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು; ಸಮಾಧಿಗೆ ಸೇರದಂತೆ ಮಾಡಿದನು (ಕೀರ್ತ. 107:20).

12) ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. (ಯೋಹಾ. 15:3).

13) ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ (ರೋಮ. 10:17).

14) ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು, ನಿನ್ನ ನುಡಿಗಳು ನನಗೆ ಹರ್ಷವೂ ಹೃದಯಾನಂದವೂ ಆದವು (ಯೆರೆ. 15:16).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
*ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್*

---

## ಭಕ್ತರ ಹೇಳಿಕೆಗಳು

ಒಮ್ಮೆ ಡಿ.ಎಲ್. ಮೂಡಿಯವರು, ಒಂದು ಸುವಾರ್ತಾ ಕೂಟದಲ್ಲಿ ಪ್ರಸಂಗಿಸುತ್ತಿದರು. ಆ ಪ್ರಸಂಗವನ್ನು ಕೇಳುತ್ತಿದ್ದ ಒಬ್ಬ ವಿದ್ಯಾವಂತನಿಗೆ ಸಹಿಸಲಾಗಲಿಲ್ಲ. ಕಾರಣ, ಮೂಡಿಯವರು ಆಂಗ್ಲಭಾಷೆ, ವ್ಯಾಕರಣಬದ್ಧವಾಗಿರಲಿಲ್ಲ. ಸುವಾರ್ತಾಕೂಟ ಮುಗಿದ ಮೇಲೆ ಆ ವಿದ್ಯಾವಂತನು ಮೂಡಿಯವರ ಬಳಿಗೆ ಹೋಗಿ "ನೀವು ಮಾಡಿದ ಪ್ರಸಂಗದಲ್ಲಿ ಒಂದು ವಾಕ್ಯವಾದರೂ ವಾಕ್ಯರಣಬದ್ಧವಾಗಿರಲಿಲ್ಲ. ಒಂದು ವಾಕ್ಯವನ್ನಾದರೂ ಸರಿಯಾಗಿ ಪೂರ್ಣಗೊಳಿಸಿದ್ದಿಲ್ಲ. ಸರಿಯಾಗಿ ಮಾತನಾಡಬಾರದೇ? ಎಂದು ಹೇಳಿದರು.

ಮೂಡಿಯವರು, ಅವರು ಹೇಳಿದ್ದನ್ನೆಲ್ಲಾ ಶಾಂತಭಾವದಿಂದ ಕೇಳಿ "ಅಯ್ಯಾ, ನಾನು ಅಷ್ಟೊಂದು ಓದಿದವನಲ್ಲ, ಪ್ರಸಂಗಿಯೂ ಅಲ್ಲ, ನನಗಾಗಿ ಪ್ರಾಣವನ್ನೇ ಕೊಟ್ಟು ಯೇಸುಕ್ರಿಸ್ತನ ತ್ಯಾಗದ ಕುರಿತು ಮಾತನಾಡಬೇಕೆಂದು ನೆನಸಿ ಕಲ್ವಾರಿ ಪ್ರೀತಿಯಿಂದ ಪ್ರೇರಿಸಲ್ಪಟ್ಟವನಾಗಿ ಪ್ರಸಂಗಿಸಿದೆ. ಸರಿ, ನೀವು ವ್ಯಾಕರಣವನ್ನು ಕಲಿತವರಾಗಿದ್ದೀರಿ. ಜ್ಞಾನವಂತರಾಗಿದ್ದೀರಿ. ನಿಮಗೆ ಜ್ಞಾನವನ್ನು ಕೊಟ್ಟ ಕ್ರಿಸ್ತನಿಗಾಗಿ ನೀವು ಯಾವ ರೀತಿಯಲ್ಲಿ ಸೇವೆ ಮಾಡುವಿರಿ? ಎಂದು ಕೇಳಿದರು. ಆಗ, ಆ ವಿದ್ಯಾವಂತನು ತನ್ನ ಕಣ್ಣಿನಲ್ಲಿರುವ ತೊಲೆಯನ್ನು ಅರಿತುಕೊಂಡನು.

ಸಂಗ್ರಹ

---

## ವಿಶೇಷ ಸೂಚನೆ

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820200781, 9902334941, 9964070654, 08202559712.**

---

ಆತನಾದರೋ ನನ್ನ ದಾರಿಯನ್ನು ಬಲ್ಲನು, ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು (ಯೋಬ. 23:10).

# ನಿನ್ನ ತಂದೆ ತಾಯಿಯವರನ್ನು ಸನ್ಮಾನಿಸು

ಮನುಷ್ಯರನ್ನು ಸೃಷ್ಟಿಮಾಡುವಾತನು ದೇವರು ತಾನೇ ಎರಡನೆಯದಾಗಿ ಮನುಷ್ಯರಿಗೆ ಜನ್ಮ ಕೊಟ್ಟವರು ತಂದೆ ತಾಯಿಯವರೇ. ಆದುದರಿಂದ ದೇವರು ಮತ್ತು ಹೆತ್ತವರು ಮನುಷ್ಯ ಜಾತಿಗೆ ಪ್ರಾಮುಖ್ಯರಾಗಿರುತ್ತಾರೆ. "ನನ್ನ ದೇವಸ್ಥಾನ ವಿಷಯದಲ್ಲಿ ಭಯಭಕ್ತಿಯುಳ್ಳವರಾಗಿರಬೇಕು" (ಯಾಜ. 26:2) ತದೋಪಾದಿ, "ಪ್ರತಿಯೊಬ್ಬನು ತನ್ನ ತಾಯಿತಂದೆಗಳ ವಿಷಯವಾಗಿ ಭಯಭಕ್ತಿಯಿಂದ ನಡೆದುಕೊಳ್ಳಬೇಕು" (ಯಾಜ. 19:3). ಈ ಭಯಭಕ್ತಿ ಎಂಬ ಶಬ್ದವು ಸತ್ಯವೇದದಲ್ಲಿರುವ 31,173 ವಾಕ್ಯಗಳಲ್ಲಿ ಬೇರೆ ಎಲ್ಲಿಯೂ ಬರೆಯಲಿಲ್ಲ.

'ಅರಸನನ್ನು ಸನ್ಮಾನಿಸಿರಿ' (1 ಪೇತ್ರ. 2:17) ನಿಮ್ಮ ಅಧಿಕಾರಿಗಳಿಗೆ ಅಧೀನರಾಗಿರಿ (1 ಪೇತ್ರ. 2:13). ನಿಮ್ಮ ಸಭಾಪಾಲಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ (ಇಬ್ರಿ. 13:17). ಪರಂತು, ಇವರಿಗೆ ಭಯ ಭಕ್ತಿಯಿಂದ ಸನ್ಮಾನಿಸಿರಿ ಎಂಬುದಾಗಿ ಬರೆಯಲಿಲ್ಲ.

ಸತ್ಯವೇದದಲ್ಲಿರುವ 66 ಪುಸ್ತಕಗಳು ಪವಿತ್ರಾತ್ಮ ಭರಿತರಾದ 40 ಮಂದಿ ಮನುಷ್ಯರಿಂದ ಬರೆಯಲ್ಪಟ್ಟಿತು. ಆದರೆ ದೇವರು ಸೀನಾಯಿ ಬೆಟ್ಟದ ಮೇಲೆ ಮೋಶೆಯನ್ನು ಕರೆದು, ತಾನು ಸ್ವತ: ಕಲ್ಲಿನ ಹಲಿಗೆಯ ಮೇಲೆ ಬರೆದ ದಶಾಜ್ಞೆಗಳನ್ನು ಮೋಶೆಯ ಕೈಯಲ್ಲಿ ಕೊಟ್ಟನು. ಆ ದಶಾಜ್ಞೆಗಳಲ್ಲಿ 5ನೇ ಆಜ್ಞೆಯಲ್ಲಿ "ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ಬಹುಕಾಲ ಇರುವಿ" (ವಿಮೋ. 20:12). "ನರಹತ್ಯ ಮಾಡಬಾರದು" (ವಿಮೋ. 20:13). ಈ ಆಜ್ಞೆಯು 6ನೇಯದಾಗಿರುತ್ತದೆ. ನರಹತ್ಯ ಮಾಡುವ ಪಾಪವು ಎಷ್ಟು ದೊಡ್ಡ ಪಾಪವೋ! ಹಾಗೆಯೇ ಹೆತ್ತವರನ್ನು ಸನ್ಮಾನಿಸದೆ ಇರುವಂಥ ಪಾಪ ಅಷ್ಟು ದೊಡ್ಡ ಪಾಪವಾಗಿರುತ್ತದೆ. 'ಪಾಪದ ಸಂಬಳ ಮರಣ' (ರೋಮ. 6:23). ಈ ವಿಷಯವಾಗಿ ಅಪೋಸ್ತಲನಾದ ಪೌಲನು ಬರೆಯುತ್ತಾನೆ, "ಮಕ್ಕಳೇ, ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆ ತಾಯಿಗಳ ಮಾತನ್ನು ಕೇಳಬೇಕು; ಇದು ಧರ್ಮ. ವಾಗ್ದಾನ ಸಹಿತವಾದ ಮೊದಲನೆಯ ಆಜ್ಞೆಯನ್ನು ಕೇಳಿರಿ. ನಿನ್ನ ತಂದೆ ತಾಯಿಗಳನ್ನೂ ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನಗೆ ಮೇಲಾಗುವದು. ನೀನು ಭೂಮಿಯ ಮೇಲೆ ಬಹುಕಾಲ ಬದುಕುವಿ" (ಎಫೆ. 6:1–3).

"ಕಂದಾ, ನನ್ನ ಉಪದೇಶವನ್ನು ಮರೆಯಬೇಡ, ನನ್ನ ಆಜ್ಞೆಗಳನ್ನು ಮನ:ಪೂರ್ವಕವಾಗಿ ನಡಿಸು. ಅವು ನಿನ್ನ ದಿನಗಳನ್ನು ಹೆಚ್ಚಿಸಿ ನಿನ್ನ ಆಯುಷ್ಯವನ್ನು ವೃದ್ದಿಗೊಳಿಸಿ ನಿನಗೆ ಸುಕ್ಷೇಮವನ್ನುಂಟು ಮಾಡುವವು" (ಜ್ಞಾನೋ. 3:1–2).

ಒಬ್ಬ ಧನವಂತನು ಯೇಸುಸ್ವಾಮಿಯ ಬಳಿಗೆ ಬಂದು ಅಡ್ಡಬಿದ್ದು ನಾನು ನಿತ್ಯ ಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಕೇಳಲು ಆತನು ಕೆಲವು ಪಾಪಗಳನ್ನು ಅವನ ಮುಂದಿಟ್ಟು ಅವುಗಳಲ್ಲಿ ನಿನ್ನ ತಂದೆ ತಾಯಿಯವರನ್ನು ಸನ್ಮಾನಿಸು ಎಂದು ಹೇಳಿದನು. ಆದುದರಿಂದ ತಾಯಿ ತಂದೆಯವರನ್ನು ಸನ್ಮಾನಿಸದವರು ನಿತ್ಯಜೀವಕ್ಕೆ ಬಾಧ್ಯಸ್ಥರಾಗಲು ಅಸಾಧ್ಯವೆಂಬುದಾಗಿ ಖಚಿತವಾಗುತ್ತದೆ.

'ಏಲಿಯ ಮಕ್ಕಳು ತಂದೆಯ ಮಾತಿಗೆ ಕಿವಿಗೊಡಲಿಲ್ಲ. ಯೆಹೋವನು ಅವರನ್ನು ಸಾಯಿಸಬೇಕೆಂದಿದ್ದನಷ್ಟೇ' (1 ಸಮು. 2:25–26).

"ಹೇಗೆಂದರೆ ತಂದೆ ತಾಯಿಗಳನ್ನು ಸನ್ಮಾನಿಸಬೇಕೆಂತಲೂ ತಂದೆಯನ್ನಾಗಲಿ ತಾಯಿಯನ್ನಾಗಲಿ ದೂಷಿಸುವವನಿಗೆ ಮರಣದಂಡನೆ ಆಗಬೇಕೆಂತಲೂ ದೇವರು ಹೇಳಿದ್ದಾನೆ" (ಮತ್ತಾ. 15:4). ಆದರೆ ಕೆಲವು ದೇವರ ಸೇವಕರು ಈ ಆಜ್ಞೆಯ ವಿಷಯವಾಗಿ ಪ್ರಾಮುಖ್ಯವೆಂಬುದಾಗಿ ಪ್ರಕಟಪಡಿಸದೆ ಇದ್ದ ಕಾರಣ ಯೇಸುಕ್ರಿಸ್ತನು ಅವರಿಗೆ "ನೀವೋ ಯಾವನಾದರೂ ತನ್ನ ತಂದೆಯಾಗಲಿ, ತಾಯಿಯನ್ನಾಗಲಿ ನೋಡಿ ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ದೇವರಿಗಾಗಿ ಇಟ್ಟಿದ್ದೇನೆ (ಕೊರ್ಬಾನ್ ಮಾಡಿದ್ದೇನೆ) ಎಂದು ಹೇಳುವದಾದರೆ ಅವನಿಗೆ ತನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕಾದದ್ದಿಲ್ಲ ಅನ್ನುತ್ತೀರಿ. ಹೀಗೆ ಸಂಪ್ರದಾಯದ ನಿಮಿತ್ತ ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದೀರಿ. ಕಪಟಿಗಳೇ, ನಿಮ್ಮ ವಿಷಯವಾಗಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ" (ಮತ್ತಾ. 15:5–7).

"ಮಕ್ಕಳೇ, ಎಲ್ಲಾ ವಿಷಯಗಳಲ್ಲಿ ನಿಮ್ಮ ತಂದೆ ತಾಯಿಗಳ ಮಾತನ್ನು ಕೇಳಿರಿ; ಇದು ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿದೆ"

ನೀನು ನಿತ್ಯವೂ ಭಜಿಸುವ ದೇವರು ನಿನ್ನನ್ನುದ್ಧರಿಸಲಿ (ದಾನಿ. 6:16).

(ಕೊಲೊ. 3:20).

ನಾನು 1957 ರಲ್ಲಿ ಒಬ್ಬ ಪ್ರಾಯಸ್ಥರನ್ನು ಸಂಧಿಸಿದಾಗ ಅವರು ದು:ಖದಿಂದ ಹೇಳಿದ್ದು ನನಗೆ ನಾಲ್ಕು ಗಂಡು, ಎರಡು ಹೆಣ್ಣು ಮಕ್ಕಳು ಇದ್ದಾರೆ. ಆದರೆ ನನ್ನ ಕಡೆಗೆ ಯಾರೂ ಲಕ್ಷ ಕೊಡುವುದಿಲ್ಲ. ನಾನು ಗತಿಹೀನನಾಗಿದ್ದೇನೆ. ನಾನು ಆಶ್ರಮಕ್ಕೆ ಸೇರಲಿಕ್ಕಿದ್ದೇನೆ ಎಂಬುದಾಗಿ ಆ ಮೇಲೆ ಸುಮಾರು 45 ವರ್ಷಗಳ ನಂತರ ನಾನು ನನ್ನ ಕುಟುಂಬಸ್ಥರ ಮನೆಗೆ ಹೋದಾಗ ಅವರ ಪಕ್ಕದ ಮನೆಯಲ್ಲಿ ಒಬ್ಬಾತ ಪ್ರಾಯಸ್ಥರನ್ನು ಕಂಡು ಮಾತಾಡಿದ. ಅವರು ಹೇಳಿದ್ದು, ನನ್ನ ಮಕ್ಕಳು ನನ್ನನ್ನು ನೋಡುವುದಿಲ್ಲ, ನಾನು ಗತಿಹೀನನಾಗಿದ್ದೇನೆ. ನಾನು ಆಶ್ರಮಕ್ಕೆ ಸೇರಲು ಪ್ರಯತ್ನಿಸುತ್ತಲಿದ್ದೇನೆಂದು ಹೇಳಿದರು. ನಾನು ಇನ್ನೂ ಅವರೊಡನೆ ಮಾತಾಡುವಾಗ ತಿಳಿದುಬಂತು. ನಾನು 1957ರಲ್ಲಿ ಭೇಟಿಯಾದ ಆ ಪ್ರಾಯಸ್ಥರು ಇವರ ತಂದೆ ಎಂದು ತಿಳಿದು ಬಂತು. ಅವರ ನಾಲ್ಕು ಗಂಡು ಮಕ್ಕಳಲ್ಲಿ ಇವರು ಒಬ್ಬರಾಗಿದ್ದರು. ಆಗ ನನಗೆ ದೇವರ ವಾಕ್ಯದಿಂದ ಒಂದು ವಾಕ್ಯವು ನೆನಪಿಗೆ ಬಂತು. ಯಾವುದೆಂದರೆ "ನೀನು ಮಾಡಿದ್ದೇ ನಿನಗಾಗುವದು, ನಿನ್ನ ಕೃತ್ಯವೇ ನಿನ್ನ ತಲೆಗೆ ಬರುವದು" (ಓಬದ್ಯ. 1:15).

ನನ್ನ ಅಜ್ಜಂದಿಯರ ಸಮಯದ ಒಂದು ಕಥೆಯನ್ನು ನನಗೆ ಒಬ್ಬರು ತಿಳಿಸಿದರು. ಒಬ್ಬ ಮುದಿ ಪ್ರಾಯಸ್ಥರಿಗೆ ಮಣ್ಣಿನ ಮಡಿಕೆ (ಗದ್ದವ್)ಯಲ್ಲಿ ಊಟಕೊಡುತ್ತಿದ್ದರು. ಒಮ್ಮೆ ಆ ಮಣ್ಣಿನ ಮಡಿಕೆ ಕೈ ತಪ್ಪಿ ಬಿದ್ದು ಒಡೆದು ಹೋಯಿತು. ಆವಾಗ ಆ ಪ್ರಾಯಸ್ಥರ ಮೊಮ್ಮಗ ಅಳಲು ತೊಡಗಿದನು, ಆಗ ಆ ಬಾಲಕನ ತಂದೆಯು ಮಗನೇ! ಯಾಕೆ ಅಳುತ್ತಿ ಎಂದು ಕೇಳಿದಾಗ, ಆ ಬಾಲಕನು ಹೇಳಿದ್ದು, ಅಪ್ಪಾ ನೀವು ಮುದುಕರಾಗುವಾಗ ನಾನು ನಿಮಗೆ ಯಾವುದರಲ್ಲಿ ಊಟ ಕೊಡಲಿ ಎಂಬುದಾಗಿ ಚಿಂತಿಸಿ ಅಳುತ್ತಿದೇನೆಂದು ಹೇಳಿದನು.

ಕಠಿಣ ಸಮಯ ಬರುತ್ತದೆಂದು ಸತ್ಯವೇದವು ನಮ್ಮನ್ನು ಎಚ್ಚರಿಸುತ್ತದೆ. ಈ ಸಮಯದಲ್ಲಿ ಹುಡುಗನು ಮುದುಕನ ಮೇಲೆಯೂ ನೀಚನು ಘನವಂತನ ಮೇಲೆಯೂ ಸೊಕ್ಕೇರಿ ನಡೆಯುವರು (ಯೆಶಾ. 3:5). ಬೆಲಿಯಾಳನ ಮಕ್ಕಳು.

ಒಂದು ಎರಡು ಆಶ್ರಮಗಳನ್ನು ನಾನು ಸಂದರ್ಶಿಸಿದಾಗ ಅಲ್ಲಿರುವ ಪ್ರಾಯಸ್ಥರ ಮಕ್ಕಳಿಗೆ, ಕುಂಟರ, ಕುರುಡರ ಮನೆಯವರಿಗೆ ಅವರನ್ನು ಸಂರಕ್ಷಿಸುವ ಜ್ಞಾನಹೀನರಾಗಿರುತ್ತಾರೆ. ಅವರಲ್ಲಿ ಭಕ್ತಿಯ ವೇಷ ಉಂಟು, ಪರಂತು ಅದರ ಫಲವು ಕಂಡು ಬರುವದಿಲ್ಲ.

"ಜ್ಞಾನವು ತನ್ನನ್ನು ಹಿಡಿದುಕೊಳ್ಳುವವರಿಗೆ ಜೀವದ ಮರವಾಗಿದೆ; ಅದನ್ನು ಅವಲಂಬಿಸುವ ಪ್ರತಿಯೊಬ್ಬನು ಧನ್ಯನು" (ಜ್ಞಾನೋ. 3:18).

"ನಿನ್ನ ತಂದೆ ತಾಯಿಗಳು ಉಲ್ಲಾಸಗೊಳ್ಳಲಿ, ನಿನ್ನನ್ನು ಹೆತ್ತವಳು ಆನಂದಪಡಲಿ" (ಜ್ಞಾನೋ. 23:25).

ಮಕ್ಕಳ ಸ್ವರ

**ನವೆಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1. ಪ್ರತಿಭಾ ಪಾಟೀಲ್
2. ಕೆ.ಸಿ. ರೆಡ್ಡಿ.
3. 6 ತಿಂಗಳು (182 ದಿನಗಳು)
4. ಮುರಾರ್ಜಿ ದೇಸಾಯಿ (ಫೆಬ್ರವರಿ 29).
5. ದಕ್ಷಿಣ ಆಫ್ರಿಕಾ
6. ಮದರ್ ತೆರೆಸಾ
7. ಸತ್ಯಮೇವ ಜಯತೆ
8. ಬೆಂಗಾಲಿ ಗೆಜೆಟ್
9. ಹತ್ತು
10. 33

ಎಡಬಿಡದೆ ಪ್ರಾರ್ಥನೆ ಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ
(1 ಥೆಸ. 5:17–18).

# ನಿನ್ನ ಹೆಬ್ಬಯಕೆ ಏನು?

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

ಕರ್ತನಲ್ಲಿ ಪ್ರಿಯರೇ ವರ್ಷದ ಅಂತಿಮ ತಿಂಗಳಿಗೆ ಬಂದಿರುವ ನಾವು ದಾಟಿ ಬಂದಿರುವ ವರ್ಷದ ಪ್ರಾರಂಭದ ದಿನಗಳನ್ನು ಯೋಚಿಸಬೇಕಾಗಿದೆ. ತೆಗೆದುಕೊಂಡ ತೀರ್ಮಾನ ಆ ಸಮರ್ಪಣೆ ಹಾಕಿಕೊಂಡ ಯೋಜನೆಗಳು ವರ್ಷಾಂತ್ಯಕ್ಕೆ ಬಂದಿರುವ ನನಗೆ ಆ ತೀರ್ಮಾನದಲ್ಲಿ ಸಮರ್ಪಣೆಯಲ್ಲಿ ಮುಂದುವರಿಯಲಿಕ್ಕೆ ಸಾಧ್ಯವಾಗಿದ್ದೆಯೋ? ಪರಾಜಯದ ಕುರಿತು ಹೇಳಲಿಕ್ಕೆ ನಮಗೆಲ್ಲ ಅನೇಕ ಕಾರಣಗಳು ಇದೆ. ಆದರೆ ಬೆಲೆ ತೆರಬೇಕಾದ ಸಮಯದಲ್ಲಿ ನಾನು ಎಷ್ಟರ ಮಟ್ಟಿಗೆ ಬೆಲೆಯನ್ನು ತೆತ್ತಿದ್ದೇನೆ? ದೇವರೊಂದಿಗೆ ಕಳೆಯಬೇಕಾದ ಸಮಯದಲ್ಲಿ ಲೋಕದೊಂದಿಗೆ ಇನ್ನಾವುದೋ ಸಂಗತಿಗಳಲ್ಲಿ ನನ್ನನ್ನು ತೊಡಗಿಸಿ ಕೊಂಡಿದ್ದೇನೋ ? 24 ಗಂಟೆಯು ಪ್ರತಿಯೊಬ್ಬರಿಗೂ ಕೊಡಲ್ಪಟ್ಟಿದೆ. ಇವತ್ತು ಟಿ.ವಿ ಮುಂದೆ ಗಂಟೆಗಟ್ಟಲೆ ಕುಳಿತುಕೊಳ್ಳುವುದಕ್ಕೆ ಸಮಯವಿದೆ, ಶಾಪಿಂಗ್‌ಗೆ ಸಮಯವಿದೆ, ಕೆಲಸಕ್ಕೂ, ಊಟಕ್ಕೂ, ಆಟಕ್ಕೂ, ವ್ಯಾಯಾಮಕ್ಕೂ, ಇಂಟರ್‌ನೆಟ್ ಮಾಧ್ಯಮಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಸಮಯವಿದೆ ಆದರೆ ಸೃಷ್ಟಿಕರ್ತನಾದ ದೇವರೊಂದಿಗೆ ಮಾತನಾಡುವುದಕ್ಕೂ, ಸ್ವರವನ್ನು ಕೇಳುವುದಕ್ಕೂ ತಾಳ್ಮೆಯಿಲ್ಲದಿರುವುದು ಬಹಳ ದು:ಖಕರವಾದ ಸಂಗತಿ. ದೇವರೊಂದಿಗೆ ಸಮಯ ಕಳೆದರೆ ನಿನ್ನಲ್ಲಿ ಮೌಲ್ಯವಾದದು ಹೊರಬರಲು ಸಾಧ್ಯ ಅದಕ್ಕೆ ಅಂದು ಮೋಶೆ ಇಸ್ರಾಯೇಲ್ಯರಿಗೋಸ್ಕರ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು. "ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು; ಆಗ ಜ್ಞಾನದ ಹೃದಯ ಪಡಕೊಳ್ಳುವೆವು" (ಕೀರ್ತ. 90:12). ಎಫೆಸದ ದೇವಜನರಿಗೆ ಪೌಲನು ಈ ಪ್ರಕಾರ ಹೇಳಿದನು. "ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ. ಈ ದಿನಗಳು ಕೆಟ್ಟವುಗಳಾಗಿವೆ; ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆ. 5:15–17).

ಅಪೋಸ್ತಲನಾದ ಪೌಲನ ಜೀವಿತವನ್ನು ಧ್ಯಾನಿಸುವಾಗ ಆತನು ದೇವರಿಗಾಗಿ ಮಾರಲ್ಪಟ್ಟ ಮನುಷ್ಯನಾಗಿದ್ದನು ಆತನು ತನ್ನ ಜೀವಿತದಲ್ಲಿ ಬೆಲೆಯನ್ನು ತೆತ್ತ ಮನುಷ್ಯನಾಗಿದ್ದನು. ಇದರ ನಿಮಿತ್ತವಾಗಿ ಆತನಲ್ಲಿ ಮೌಲ್ಯವಾದದು ಹೊರಗೆ ಬಂತು. ಆತನು ಪ್ರಕಟಣೆಯ ಉಗ್ರಾಣಕಾರನಾಗಿದ್ದನು. ಪೌಲನ ಪ್ರಯಾಣದಲ್ಲಿ ಅವನ ಹಿಂದೆಯೇ ಹೋಗಿ ಅವನ ಮಾತುಗಳನ್ನು ಕೇಳಿಸಿಕೊಳ್ಳಿರಿ ಅವನು ಕ್ರೂಜಿತನಾದ ಕ್ರಿಸ್ತನ ವಿಷಯವಲ್ಲದೆ ಬೇರೆ ಏನ್ನನ್ನೂ ಮಾತಾಡಲಿಲ್ಲ ಕ್ರಿಸ್ತನಿಗಾಗಿ ಜನರನ್ನು ಗೆದ್ದುಕೊಳ್ಳುವುದು ಹಾಗೂ ಇತರರೊಂದಿಗೆ ವೈಯಕ್ತಿಕ ಕ್ರಿಸ್ತೀಯ ಅನುಭವಗಳನ್ನು ಹಂಚಿಕೊಳ್ಳುವುದು ಇವೇ ಅಪೋಸ್ತಲನಾದ ಪೌಲನ ಹೃದಯದಲ್ಲಿ ಯಾವಾಗಲೂ ಕುದಿಯುತ್ತಿದ್ದ ಹೆಬ್ಬಕೆಯಾಗಿತ್ತು. ಸುವಾರ್ತೆಯನ್ನು ಹಂಚುವುದಕ್ಕಾಗಿ ಪೌಲನು ಹಿಂಸೆಯನ್ನು ಅನುಭವಿಸಲು ಸಹ ಸಿದ್ಧನಿದ್ದನು. ಅವನು ಸೆರೆಗೆ ಹಾಕಲ್ಪಟ್ಟನು, ಹೊಡೆಸಲ್ಪಟ್ಟನು, ಕಟ್ಟಿಹಾಕಲ್ಪಟ್ಟನು, ಹಸಿದನು, ಒಂಟಿಯಾಗಿ ನರಳಿದನು, ತನ್ನ ಜೊತೆ ಕೆಲಸಗಾರರಿಂದ ಕೈ ಬಿಡಲ್ಪಟ್ಟನು. ಇದ್ಯಾವೂದು ಅವನನ್ನು ಸುವಾರ್ತೆ ಸಾರದಂತೆ ತಡೆಯಲಿಲ್ಲ. ಅವನಿಗೆ ಮಾತಾಡಲೂ ಆಗದಿದ್ದಾಗ, ತನ್ನ ಸಂದೇಶವನ್ನು ಬರೆಯುತ್ತಿದ್ದನು. ಅಥವಾ ಯಾರ ಕೈಲಾದರೂ ಬರೆಯಿಸುತ್ತಿದ್ದನು "ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ; ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದದೆ. ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ; ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು" (2 ತಿಮೊ. 4:6–8). ಎಂದು ಹೇಳುವ ದಿನ ಬರುವವರೆಗೂ ಕೆಲಸ ಮಾಡಿದನು.

ಇಂದು ನಮ್ಮ ಸುತ್ತಮುತ್ತ ನೋಡುವುದಾದರೆ ಎಷ್ಟೋ ಜನರು ಕ್ರಿಸ್ತ ರಹಿತರಾಗಿ ಇರುವುದನ್ನು ಕಾಣುತ್ತೇವೆ. ನಾವು ಆಸ್ಪತ್ರೆಗೆ ಹೋಗಿ ನೋಡುವುದಾದರೆ ಎಷ್ಟೋ ಜನರು ಕ್ರಿಸ್ತ ರಹಿತರಾಗಿ ಸಾಯುತ್ತಿದ್ದಾರೆ ಸಮುದ್ರ ತೀರಕ್ಕೆ, ಕ್ರೀಡಾಂಗಣಕ್ಕೆ ಹೋಗಿ ನೋಡಿರಿ ಅನೇಕರು ಕ್ರಿಸ್ತನ ಸುವಾರ್ತೆಯನ್ನು ಕುರಿತು ಕೇಳೇ ಇಲ್ಲ. ಯೇಸು ತನ್ನ ಶಿಷ್ಯರೊಂದಿಗೆ ಈ ಕೆಲಸದ ಮಹತ್ವದ ಕುರಿತು ಮಾತನಾಡುವಾಗ ಅವರನ್ನು ಕೊಯ್ಲಿಗೆ ಬಂದಿರುವ ದೊಡ್ಡ ಸುಗ್ಗೀ ಹೊಲಕ್ಕೆ ಹೋಲಿಸಿದ್ದಾನೆ ಮಾತ್ರವಲ್ಲದೆ ಕೆಲಸದವರು ಸ್ವಲ್ಪ ಎಂದು ಹೇಳಿದ್ದನ್ನು ಕಾಣಬಹುದು (ಮತ್ತಾ. 9:37). ಇಂತಹ ದೊಡ್ಡ ಅಗತ್ಯತೆಯ ಕುರಿತು ಇಂದು ಅನೇಕ ವಿಶ್ವಾಸಿಗಳಿಗೆ ಅರಿವೇ ಇಲ್ಲ "ಎಲ್ಲರೂ ಸ್ವಕಾರ್ಯಗಳ ಮೇಲೆ ಮನಸ್ಸಿಡುತ್ತಾರೆಯೇ ಹೊರತು ಯೇಸು ಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಡುವದಿಲ್ಲ" (ಫಿಲಿ. 2:21) . ಇವತ್ತು ಸ್ವಾರ್ಥ ಮನೆಮಾಡಿಕೊಂಡಿದ್ದೆ ತಪ್ಪಿಸಿಕೊಳ್ಳಲಿಕ್ಕೆ ಅನೇಕ ನೆಪಗಳನ್ನು ಹೇಳಬಹುದು ಅದು ಇಲ್ಲಿ ಮಾತ್ರ ಆದರೆ ಪರಲೋಕದಲ್ಲಿ ನಿನ್ನ ನೆಪ ಕೇಳುವುದಕ್ಕೆ ಸಮಯವೇ ಇಲ್ಲ. ಕರ್ತನಾದ ಯೇಸುಕ್ರಿಸ್ತನಿಂದ ಅನೇಕ ಉಪಕಾರಗಳನ್ನು,

ಅವನಿಗೋಸ್ಕರ ಯಾವಾಗಲೂ ದೇವರಲ್ಲಿ ವಿಜ್ಞಾಪನೆಯು ನಡೆಯಲಿ;
ದಿನ ದಿನವೂ ಅವನಿಗೆ ಆಶೀರ್ವಾದಗಳುಂಟಾಗಲಿ (ಕೀರ್ತ. 72:15).

ಅದ್ಭುತಗಳನ್ನು, ಪಾಪ ಕ್ಷಮಾಪಣೆಯನ್ನು, ಬಿಡುಗಡೆ ಹೊಂದಿಕೊಂಡ ನೀವು ಇವತ್ತು ನಿಮಗೆ ಕೊಟ್ಟ ದಿನಗಳನ್ನು, ಸಮಯವನ್ನು ಹೇಗೆ ಉಪಯೋಗಿಸಿದಿರಿ. ಯೇಸುವು ತನ್ನನ್ನು ತಾನು ಸಮಾರ್ಯದ ಸ್ತ್ರೀಗೆ ಪ್ರಕಟಿಸಿಕೊಂಡಾಗ ಆಕೆಯೂ ತನ್ನ ಜನರ ಬಳಿಗೆ ಓಡಿಹೋಗಿ, ಕ್ರಿಸ್ತನು ತನ್ನ ಜೀವಿತದಲ್ಲಿ ಮಾಡಿದ್ದೆಲ್ಲವನ್ನೂ ಎಲ್ಲರೊಂದಿಗೆ ಹಂಚಿಕೊಂಡಳು (ಯೋಹಾ. 4:5–26). ಗೆರಸೇನರ ಸೀಮೆಯ ಸಮಾಧಿಯಲ್ಲಿ ವಾಸಮಾಡುತ್ತಿದ್ದ ದೆವ್ವಹಿಡಿದ ಮನುಷ್ಯನು ದೇವರಿಂದ ಬಿಡುಗಡೆ ಹೊಂದಿಕೊಂಡ ನಂತರ ತನ್ನ ಜನರ ಬಳಿಗೆ ಹೋಗಿ ಕ್ರಿಸ್ತನು ತನ್ನ ಜೀವಿತದಲ್ಲಿ ಮಾಡಿದ ಉಪಕಾರಗಳನ್ನು ದೆಕಪೋಲಿ ಎಂಬ ಸೀಮೆಯಲ್ಲಿ ಸಾರಿ 10 ಪಟ್ಟಣಗಳ ಜನರನ್ನು ಕ್ರಿಸ್ತನಿಗಾಗಿ ಗೆದ್ದನು "ಸುಗ್ಗಿಯಲ್ಲಿ ಕೂಡಿಸುವವನು ಬುದ್ಧಿವಂತನು; ಕೊಯ್ಲಿನಲ್ಲಿ ತೂಕಡಿಸುವವನು ನಾಚಿಕೆಗೆಟ್ಟವನು" (ಜ್ಞಾನೋ. 10:5).

ಅವಿಶ್ವಾಸಿಯು ತನ್ನ ಪಾಪದಲ್ಲಿ ಸಾಯುವುದನ್ನು ಆತನೆಂದಿಗೂ ಇಷ್ಟಪಡುವುದಿಲ್ಲ ಯಾರಾರು ಇನ್ನೂ ಆತನನ್ನು ಕಂಡುಕೊಳ್ಳದೆ ಇದ್ದಾರೋ, ಅವರಿಗೆ ತನ್ನ ಜೀವ ವಾಕ್ಯವನ್ನು ಹಂಚುವುದಕ್ಕಾಗಿ ಆತನಿಗೆ ಅನೇಕ ಪಾದಗಳು, ಅನೇಕ ಕೈಗಳು, ಅನೇಕ ತುಟಿಗಳು ಹಾಗೂ ಅನೇಕ ಜನರ ಅವಶ್ಯಕವಿದೆ. ದೇವರ ಬಳಿಯಲ್ಲಿ ಕೆಲಸಗಾರರಿಗೆ ಕೊರತೆಯಿಲ್ಲ. ಅತನು ಬಯಸಿದರೆ ಅನೇಕ ದೇವದೂತರನ್ನು, ಕ್ರಿಸ್ತನ ಸುವಾರ್ತೆಯನ್ನು ಸಾರುವುದಕ್ಕೆ ಕಳುಹಿಸಬಹುದಾಗಿತ್ತು. ಅವರು ಈ ಕಾರ್ಯವನ್ನು ಒಂದೇ ರಾತ್ರಿಯಲ್ಲಿ ಮಾಡಿ ಮುಗಿಸುತ್ತಿದ್ದರು. ಕ್ರಿಸ್ತನ ಜನನದ ಸುವಾರ್ತೆಯನ್ನು ಕುರುಬರಿಗೆ ಸಾರಿ ಹೇಳುವುದಕ್ಕೆ ತನ್ನ ದೂತರನ್ನು ಕಳುಹಿಸಿದು ನಿಜ. ಕ್ರಿಸ್ತನ ಪುನರುತ್ಥಾನದ ಸುವಾರ್ತೆಯನ್ನು ತಿಳಿಸುವುದಕ್ಕಾಗಿಯೇ ಅಂದು ಬೆಳಿಗ್ಗೆ ದೂತರನ್ನು ಕಳುಹಿಸಿದ್ದು ಸತ್ಯ ಸಂಗತಿಯಾಗಿದೆ. ಆದರೆ ಈಗಲೂ ಸಹ ಸುವಾರ್ತೆಯನ್ನು ಸಾರುವುದಕ್ಕೆ ತನ್ನ ದೂತರನ್ನು ಕಳುಹಿಸಬಹುದಾಗಿತ್ತು ಆದರೆ ಆತನು ಅವರನ್ನು ಶಿಲುಬೆಯ ವಿಷಯದಲ್ಲಿ ಸಾಕ್ಷಿಗಳಾಗಿರಲು ನೇಮಿಸಿಲ್ಲ, ಸಾಧರಣ ಬಲಹೀನ ಮನುಷ್ಯರಾದ ನಮ್ಮನ್ನು ಆರಿಸಿಕೊಂಡಿದ್ದಾನೆ. ಜನರನ್ನು ಕ್ರಿಸ್ತನ ಬಳಿಗೆ ತರುವುದಕ್ಕಾಗಿ ಈ ಸುವಾರ್ತೆಯನ್ನು ನಮ್ಮ ಕೈಗಳಲ್ಲಿ ಕೊಟ್ಟಿದ್ದಾನೆ. ಆದುದರಿಂದ ನಮ್ಮ ಜವಾಬ್ದಾರಿಕೆಯನ್ನು ಮರೆಯಬಾರದು.

ಹೌದು ನಾನು ಮತ್ತು ನೀನು ಜೀವಿಸುವುದಕ್ಕಾಗಿ ಕ್ರಿಸ್ತನು ಮರಣವನ್ನು ರುಚಿಸಿ ನೋಡಿದ್ದಾನೆ. ಆತನು ನಮ್ಮ ಪರವಾಗಿ ದೇವರಿಗೆ ಸಾಲ ತೀರಿಸಿದ್ದಾನೆ. ಕರ್ತಾಧಿಕರ್ತನೂ, ರಾಜಾಧಿರಾಜನೂ ಆದ ಕ್ರಿಸ್ತನು ತನ್ನ ತಲೆಯನ್ನಿಡುವಷ್ಟು ಸಹ ಸ್ಥಳವನ್ನು ಕಾಣದೆ ಸೇವಕನಂತೆ ಈ ಭೂಮಿಯ ಮೇಲೆ ಸಂಚರಿಸಿದನು. ಆತನು ನಮ್ಮನ್ನು ಪ್ರೀತಿಸಿದ್ದರಿಂದಲೇ ಈ ಕಾರ್ಯವನ್ನು ಮಾಡಿದನು.

ಪ್ರಿಯ ದೇವ ಸಭೆಯೇ ನಿನ್ನ ಸುಖಕರ ವಲಯದಿಂದ ಹೊರ ಬರಬೇಕಾಗಿದೆ. ಸಭಾ ಚರಿತ್ರೆಯಲ್ಲಿ ನೋಡುವುದಾದರೆ ಎಲ್ಲಾ ಕಾಲಕ್ಕಿಂತಲೂ ಈಗ ಕರ್ತನ ಹೊಲದ ಸುಗ್ಗಿಯಲ್ಲಿ ಕೆಲಸ ಮಾಡುವವರೂ ಕಡಿಮೆಯಾಗಿದ್ದಾರೆ. ಇವತ್ತು ತಂಪಾದ ಅನುಭವದಿಂದ ಹೊರಗೆ ಬನ್ನಿರಿ. ಇದುವರೆಗೆ ಅಲಕ್ಷವಾಗಿ ಜೀವಿಸಿದ ವರುಷಗಳು, ದಿನಗಳು ಸಾಕು. ಇವತ್ತು ಕರ್ತನು ಪ್ರತಿದಿನವೂ ನನಗಾಗಿ ಯಾರು ಹೋಗುವಿರಿ? ನಶಿಸಿಹೋಗುವ ಜನರು ಮಧ್ಯದಲ್ಲಿ ನಡೆಯಲು ಯಾರು ನನಗೆ ಕಾಲುಗಳಾಗಿರುವಿರಿ, ಹಾಗೆಯೇ ನಾನು ಮಾತನಾಡಲು ಯಾರು ನನಗೆ ಬಾಯಾಗುವಿರಿ? ಎಂಬ ಕೂಗು ಕೇಳುವುದಿಲ್ಲವೇ?

ಈ ವರ್ಷದ ಅಂತ್ಯಕ್ಕೆ ಬಂದಿರುವ ನಿನ್ನ ಜೀವಿತದಲ್ಲಿ ಈ ಸಂದೇಶವೂ ಕ್ರಿಸ್ತನ ಸುವಾರ್ತೆಯನ್ನು ಹೊತ್ತುಕೊಂಡು ಹೋಗುವ ಹೆಬ್ಬಯಕೆ ನಿನ್ನಲ್ಲಿ ಉಂಟಾಗಲಿ. ಕೋಟ್ಯಾಧಿಪತಿಯಾದ ಪೌಲನು ಕ್ರಿಸ್ತನನ್ನು ಅರಿಯುವುದೇ ಶ್ರೇಷ್ಠವೆಂದು ತಿಳಿದು ತನಗೆ ಲಾಭವಾಗಿದ್ದ ಎಲ್ಲವನ್ನು ನಷ್ಟವೆಂದೆಣಿಸಿದ್ದು ಮಾತ್ರವಲ್ಲ ಅದನ್ನು ಕಸವೆಂದೆಣಿಸಿದನು. ಕ್ರಿಸ್ತನಿಗಾಗಿ ಹುಚ್ಚನಾದನು ಯುರೋಪ್ ರಾಷ್ಟ್ರಗಳನ್ನು ಕ್ರಿಸ್ತನಿಗಾಗಿ ಅಲ್ಲಾಡಿಸಿದನು, ಅನೇಕ ಸಭೆಗಳನ್ನು ಸ್ಥಾಪಿಸಿದನು. ಇವತ್ತು ನಿನ್ನೊಳಗೆ ಸುವಾರ್ತೆಯನ್ನು ಸಾರಬೇಕೆಂಬ ಬಯಕೆ ಅಗ್ನಿ ಜ್ವಾಲೆಯಂತೆ ನಿನ್ನೊಳಗೆ ಹತ್ತಿ ಉರಿಯಲಿ. ಪೌಲನು ಹೇಳುತ್ತಾನೆ, "ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಅದೆ. ಹೀಗಿರುವದರಿಂದ ರೋಮಾಪುರದಲ್ಲಿ ನಿಮಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧವಾಗಿದ್ದೇನೆ. ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟು ಮಾಡುವಂಥದಾಗಿದೆ" (ರೋಮ. 1:14–16). "ನಾನು ಸುವಾರ್ತೆಯನ್ನು ಸಾರಿದರೂ ಹೊಗಳಿಕೊಳ್ಳುವದಕ್ಕೆ ನನಗೇನೂ ಆಸ್ಪದವಿಲ್ಲ; ಸಾರಲೇಬೇಕೆಂಬ ನಿರ್ಬಂಧ ನನಗುಂಟು. ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ" (1 ಕೊರಿ. 9:16). ಇದು ಪೌಲನ ಹರಿಯುವ ರಕ್ತದಲ್ಲಿ ಕುದಿಯುವ ಹೆಬ್ಬಕೆಯಾಗಿತ್ತು. ಈ ವರ್ಷದ ಅಂತ್ಯದಿಂದಲೇ ನಿನ್ನ ತೀರ್ಮಾನಗಳು ಕ್ರಿಸ್ತನಿಗಾಗಿ ಬಲಗೊಳ್ಳಲಿ. ನಿನ್ನ ಕಾಲುಗಳು ನಶಿಸಿಹೋಗುತ್ತಿರುವ ಜನರ ಮಧ್ಯದಲ್ಲಿ ನಡೆದಾಡುವ ಕಾಲುಗಳಾಗಿ, ಮಾತಾಡುವ ಬಾಯಿಗಳಾಗಿ, ಬೆಂಕಿಯಿಂದ ಎಳೆದು ರಕ್ಷಿಸುವ ಕೈಗಳಾಗಿ ಮಾರ್ಪಡಲಿ ದೇಶ ನಿನ್ನ ಮುಂದೆ ಇದೆ ಏಳು ಪ್ರಕಾಶಿಸು.

ಕರ್ತನು ತಾನೇ ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವದಿಸಲಿ.

ನೀನೂ ನಿನ್ನ ದೇವರ ಸಹಾಯದಿಂದ ತಿರುಗಿಕೋ; ನೀತಿಪ್ರೀತಿಗಳನ್ನನುಸರಿಸಿ ನಿನ್ನ ದೇವರನ್ನು ಎಡಬಿಡದೆ ನಿರೀಕ್ಷಿಸಿಕೊಂಡಿರು (ಹೋಶೇ. 12:6).

**ವಿಶ್ವಾಸದಮನೆಗೆ ಭೇಟಿ ನೀಡಿದವರ**
## ಅನಿಸಿಕೆಗಳು :


ಕ್ರಿಸ್ತನಲ್ಲಿ ಪ್ರೀತಿಯ ಆತ್ಮೀಯರೇ,

ದೇವರ ವಾಕ್ಯದಲ್ಲಿ ನಾವು ನೋಡುವಾಗ ನಮ್ಮ ಕರ್ತನು ಹೊರುವಂತಹ ಮಾತು ಕಷ್ಟದಲ್ಲಿರುವವರಿಗೆ ಖಾಯಿಲೆಯಲ್ಲಿರುವವರಿಗೆ, ಅನ್ನವಿಲ್ಲದವರಿಗೆ, ವಸ್ತ್ರವಿಲ್ಲದವರಿಗೆ ನೀವು ಏನು ಸಹಾಯ ಮಾಡುತ್ತೀರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂಬುದಾಗಿ. ಈ ಸಂಸ್ಥೆಯವರು ಈ ಒಂದು ರೀತಿಯ ಸೇವೆ ಮಾಡುತ್ತಿರುವುದು ನಿಜವಾಗಿಯೂ ದೇವರಿಗೆ ಮಹಿಮೆ ತರುವಂತಹ ವಿಷಯವಾಗಿದೆ. ತಿರಸ್ಕರಿಸಿದ ಜನರು ಕೈಬಿಟ್ಟ ಇಂತಹ ಮಾನಸಿಕ ರೋಗಿಗಳನ್ನು ಪ್ರೀತಿಯಿಂದ ನೋಡಿಕೊಂಡು ಅವರ ಆರೈಕೆ ಮಾಡಿ ಅವರಿಗೆ ಬೇಕಾದ ಎಲ್ಲಾ ಅಗತ್ಯತೆಗಳನ್ನು ಪೂರೈಸಿ ಅವರು ಸಂತೋಷವಾಗಿರುವಂತೆ ನೋಡಿಕೊಳ್ಳುತ್ತಿರುವ ಈ ಸಂಸ್ಥೆಯ ಮುಖ್ಯಸ್ಥರಾದ ಪಾ॥ ಸುನಿಲ್‌ರವರನ್ನು ಮತ್ತು ಸಂಸ್ಥೆಗಾಗಿ ಕೆಲಸ ಮಾಡುವ ಎಲ್ಲಾ ಸಹೋದರರನ್ನು ದೇವರು ಆಶೀರ್ವದಿಸಿ, ಸಂತೋಷ, ಸಮಾಧಾನ ಕೊಟ್ಟು ನಡಿಸಲೆಂದು ಪ್ರಾರ್ಥನಾ ಪೂರ್ವಕವಾಗಿ ಹಾರೈಸುತ್ತಿರುವ


ಕ್ರಿಸ್ತನಲ್ಲಿ ಪ್ರೀತಿಯ **ಸಹೋ॥ ದಾನಿಯೇಲ್ ಪೀಟರ್**




# ನಮ್ಮೊಂದಿಗೆ ಆಚರಿಸಿ



**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ಆರೋಗ್ಯ ಸ್ವರ

# ಬಹೂಪಯೋಗಿ ನಿಂಬೆಹಣ್ಣು

- ಬಿಸಿಲಿನಲ್ಲಿ ಬಳಲಿ ಬಂದಾಗ ನಿಂಬೆಹಣ್ಣಿನ ಪಾನಕ ಕುಡಿದರೆ ಶರೀರಕ್ಕೆ ತಂಪಾಗಿ ಹಾಯೆನಿಸುತ್ತದೆ.
- ನಿಂಬೆ ರಸದೊಂದಿಗೆ ರೋಸ್ ವಾಟರ್ ಬಳಸಿ ಮುಖಕ್ಕೆ ಲೇಪಿಸುವುದರಿಂದ ಮುಖದ ಜಿಡ್ಡು ಮಾಯವಾಗಿ ಮುಖ ಕಾಂತಿಯುತವಾಗುವದು.
- ನಿಂಬೆ ರಸವನ್ನು ಸಕ್ಕರೆಯೊಂದಿಗೆ ಸೇರಿಸಿ ಸೇವಿಸಿದರೆ ಕೆಮ್ಮು ನಿವಾರಣೆ ಆಗುತ್ತದೆ.
- ನಿಂಬೆ ರಸಕ್ಕೆ ಅರಿಶಿಣ ಸೇರಿಸಿ ಮೊಡವೆಗಳಿಗೆ ಲೇಪಿಸಿದರೆ ಮೊಡವೆ ನಿವಾರಣೆ ಆಗುತ್ತದೆ.
- ತಾಜಾ ಮಜ್ಜಿಗೆಯೊಂದಿಗೆ ನಿಂಬೆರಸ ಉಪ್ಪು ಬೆರೆಸಿ ಸೇವಿಸಿದರೆ, ಅಜೀರ್ಣ, ಹೊಟ್ಟೆ ಉರಿ ನಿವಾರಣೆ ಆಗುತ್ತದೆ.
- ನಿಂಬೆರಸಕ್ಕೆ ಹಾಲುಕೆನೆ ಸೇರಿಸಿ ಕಪ್ಪು ಕಲೆಗಳಿಗೆ ಮೃದುವಾಗಿ ಉಜ್ಜುವುದರಿಂದ ಕಪ್ಪುಕಲೆ ನಿವಾರಣೆ ಆಗುತ್ತದೆ.
- ಆನೆ ಇದ್ದರೂ ಸಾವಿರ, ಸತ್ತರೂ ಸಾವಿರ ಎಂಬಂತೆ ನಿಂಬೆಹಣ್ಣು ರಸವಿದ್ದಾಗ ಮಾತ್ರವಲ್ಲದೆ ರಸ ತೆಗೆದ ಚರಟದಿಂದಲೂ ಅನೇಕ ಉಪಯೋಗಗಳಿವೆ.
- ಹಣ್ಣಿನ ಚರಟವನ್ನು ಕಾಲಿನ ಉಗುರುಗಳಿಗೆ ಮಸಾಜ್ ಮಾಡುವುದರಿಂದ ಉಗುರು ಸ್ವಚ್ಛವಾಗಿ ಕಳೆ ಹೊಂದುತ್ತದೆ.
- ಹಿಂಡಿದ ಸಿಪ್ಪೆಯನ್ನು ರಾತ್ರಿ ಕೈಗೆ ಉಜ್ಜಿಕೊಂಡು ಮಲಗಿದರೆ ಕೈ ಮೃದುವಾಗುತ್ತದೆ.
- ಸಿಪ್ಪೆಯನ್ನು ಕಾಲಿನ ಹಿಮ್ಮಡಿಗೆ ಉಜ್ಜುವುದರಿಂದ ಹಿಮ್ಮಡಿ ಬಿರುಕುಗಳಿಗೆ ಮುಚ್ಚಿ ಹಿಮ್ಮಡಿ ಮೃದುವಾಗುವುದು.
- ಸಿಪ್ಪೆಯನ್ನು ತಾಮ್ರದ ಪಾತ್ರೆಗಳಿಗೆ ಉಜ್ಜುವುದರಿಂದ ಪಾತ್ರೆ ಹೊಳಪಾಗುತ್ತದೆ.
- ಕತ್ತಿನ ಸುತ್ತಲೂ ಸನ್‌ಬರ್ನ್‌ನಿಂದ ಚರ್ಮ ಕಪ್ಪಾಗಿದ್ದರೆ ಸಿಪ್ಪೆಯೊಂದಿಗೆ ಕೆನೆ ಸೇರಿಸಿ ಉಜ್ಜುವುದರಿಂದ ಕಲೆ ನಿವಾರಣೆ ಆಗುತ್ತದೆ.

## ಹಣ್ಣು ಸಿಪ್ಪೆಗಳ ಉಪಯೋಗಗಳು

- ಪಚ್ಚ ಬಾಳೆಹಣ್ಣನ್ನು ತಿಂದ ಮೇಲೆ ಸಿಪ್ಪೆ ಎಸೆಯದೆ ಅದನ್ನು ಮುಖಕ್ಕೆ ಮೃದುವಾಗಿ ಉಜ್ಜುತ್ತ ಬಂದರೆ ಮುಖದ ಮೇಲಿನ ಕಪ್ಪುಕಲೆಗಳು ಮಾಯವಾಗುತ್ತದೆ.
- ಕಲ್ಲಂಗಡಿ ಹಣ್ಣಿನ ಸಿಪ್ಪೆಯ ಬಿಳಿ ತಿರುಳನ್ನು ದೋಸೆ ಹಿಟ್ಟಿನೊಂದಿಗೆ ರುಬ್ಬಿದರೆ ದೋಸೆ ಮೃದುವಾಗುವುದು.
- ಹಿಂಡಿದ ನಿಂಬೆ ಚರಟವನ್ನು ಎಸೆಯದೆ ತಲೆಗೆ ಉಜ್ಜಿಕೊಂಡರೆ ತಲೆಹೊಟ್ಟು ಮಾಯವಾಗುತ್ತದೆ.
- ಕಿತ್ತಲೆ ಸಿಪ್ಪೆಯನ್ನು ಹಲ್ಲಿಗೆ ಉಜ್ಜುವುದರಿಂದ ಹಲ್ಲು ಹೊಳಪಾಗುತ್ತದೆ.
- ಸೌತೆಕಾಯಿ ಸಿಪ್ಪೆಯನ್ನು ಎಸೆಯದೆ ಮಿಕ್ಸ್ ಮಾಡಿ ಮುಖಕ್ಕೆ ಲೇಪಿಸಿದರೆ ಮುಖ ಮೃದುವಾಗಿ ಕಾಂತಿಯುತವಾಗಿ ಕಾಣುವುದು.
- ಬೀಟ್‌ರೂಟ್ ಸಿಪ್ಪೆಯನ್ನು ಎಸೆಯದೆ ತುಟಿಗೆ ಮೃದುವಾಗಿ ಉಜ್ಜುವುದರಿಂದ ತುಟಿಗಳು ಕೋಮಲವಾಗುವುದಲ್ಲದೆ ಕಾಂತಿಯುತವಾಗುತ್ತದೆ.
- ದಾಳಿಂಬೆ ಹಣ್ಣಿನ ಸಿಪ್ಪೆಯನ್ನು ಒಣಗಿಸಿ ಪುಡಿ ಮಾಡಿ ಇಟ್ಟುಕೊಂಡು ಅದನ್ನು ನೀರಿನೊಂದಿಗೆ ಸೇರಿಸಿ ದಿನಕ್ಕೆ 3 ಬಾರಿ ಬಾಯಿ ಮುಕ್ಕಳಿಸಿದರೆ ಬಾಯಿಯ ದುರ್ವಾಸನೆ ದೂರವಾಗುತ್ತದೆ. ದಾಳಿಂಬೆ ಸಿಪ್ಪೆಯ ರಸವನ್ನು ಕುಡಿದರೆ ಅತಿಸಾರ ನಿಯಂತ್ರಣಕ್ಕೆ ಬರುತ್ತದೆ.
- ಮೂಸಂಬಿ ಹಣ್ಣಿನ ಸಿಪ್ಪೆಯನ್ನು ಒಣಗಿಸಿ ಪುಡಿ ಮಾಡಿ ಇಟ್ಟುಕೊಂಡು ಮೊಡವೆಗಳಿಗೆ ಲೇಪಿಸಿದರೆ ಮೊಡವೆ, ಕಪ್ಪುಕಲೆಗಳು ನಿವಾರಣೆ ಆಗುತ್ತವೆ.

ಸಂಗ್ರಹ.

ಜೀವಮಾರ್ಗಗಳನ್ನು ನನಗೆ ತಿಳಿಯಪಡಿಸಿದ್ದೀ; ನಿನ್ನ ಸಮ್ಮುಖದಲ್ಲಿ
ನನ್ನನ್ನು ಆನಂದಭರಿತನಾಗ ಮಾಡುವಿ (ಅ.ಕೃ. 2:28).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/- | ಆರು ತಿಂಗಳಿಗೊಮ್ಮೆ | ರೂ. 6000/- |
| ಮೂರು ತಿಂಗಳಿಗೊಮ್ಮೆ | ರೂ. 2000/- | ವರ್ಷಕ್ಕೊಮ್ಮೆ | ರೂ. 8000/- |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ನಿಮ್ಮೆಗೆಲ್ಲಾ ಸಂತಸ ಸುದ್ದಿ

# VOICE OF GOD
## (ದೇವರ ಸ್ವರ)

ಈಗಾಗಲೇ **VOICE OF GOD** ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

### ಆಶ್ರಮದ ಅವಶ್ಯಕತೆಗಳು

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯುವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ನಮ್ಮ ದೇವರನ್ನು ಸ್ತುತಿಸುವದು ಒಳ್ಳೇದೂ ಸಂತೋಷಕರವೂ ಆಗಿದೆ;
ಆತನನ್ನು ಕೀರ್ತಿಸುವದು ಯುಕ್ತವಾಗಿದೆ (ಕೀರ್ತ. 147:1).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಮೇಲಿನ ಈ ಎಲ್ಲಾ ಆಶೀರ್ವಾದಗಳನ್ನು ಸೈತಾನನು ಕೆಡಿಸುವುದಕೋಸ್ಕರ ಆದಾಮ ಹವ್ವರನ್ನು ಶೋಧಿಸುವುದನ್ನು ನಾವು ಕಾಣಬಹುದು. ಇಂದು ದೇವರು ನಿನಗೆ ಅನೇಕ ವಿಧವಾದ ಆಶೀರ್ವಾದಗಳನ್ನು ಇಟ್ಟಿದ್ದಾನೆ. ಸೈತಾನನು ನಿನ್ನನ್ನು ಶೋಧಿಸಿ ಈ ಎಲ್ಲಾ ಆಶೀರ್ವಾದಗಳನ್ನು ನಷ್ಟಪಡಿಸುತ್ತಾನೆ. ದೇವರ ವಾಕ್ಯ ಸೈತಾನನ ಕುರಿತು ಅವನು ಯುಕ್ತಿಯುಳ್ಳವನೆಂದು ಹೇಳುತ್ತದೆ, ಅವನು ಆದಾಮ ಹವ್ವರನ್ನು ಶೋಧಿಸುವಾಗ ಕೇಳಿದ ಮೊದಲ ಪ್ರಶ್ನೆ ಏನವ್ವಾ, ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆಕೊಟ್ಟಿರುವದು ನಿಜವೋ ಎಂದು ಕೇಳಲು (ಆದಿ. 3:1) ಮೊದಲು ಅವನು ಪರೀಕ್ಷಿಸುವುದು ವಚನ ನಮ್ಮ ಹೃದಯದಲ್ಲಿ ಇದೆಯೋ ಇಲ್ಲವೋ? ಎಂದು. "ಯೌವನಸ್ಥನು ತನ್ನ ನಡತೆಯನ್ನು ಶುದ್ಧಪಡಿಸಿಕೊಳ್ಳುವುದು ಯಾವುದರಿಂದ? ನನ್ನ ವಾಕ್ಯವನ್ನು ಗಮನಿಸಿ ನಡೆಯುವುದರಿಂದಲೇ" (ಕೀರ್ತ. 119:9). "ನಿನಗೆ ವಿರೋಧವಾಗಿ ಪಾಪಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ" (ಕೀರ್ತ. 119:11). ಕರ್ತನಾದ ಯೇಸು ಸ್ವಾಮಿಯನ್ನು ಸೈತಾನನು ಶೋಧಿಸುವಾಗಲೂ ವಾಕ್ಯವನ್ನು ಇಟ್ಟುಕೊಂಡೇ ಶೋಧಿಸಿದನು. ಆದರೆ ಕರ್ತನು ಅವನನ್ನು ವಾಕ್ಯದ ಮೂಲಕವೇ ಜಯಿಸುವುದನ್ನು ಕಾಣಬಹುದು. ಆದರೆ ಸೈತಾನನ ಪ್ರಶ್ನೆಗೆ ಹವ್ವಳ ಉತ್ತರವನ್ನು ನಾವು ನೋಡುವುದಾದರೆ ದೇವರು ಹೇಳಿದ್ದಕ್ಕೂ, ಹವ್ವಳು ಕೊಡುವ ಉತ್ತರಕ್ಕೂ ಇರುವ ವ್ಯತ್ಯಾಸವನ್ನು ಕಾಣಬಹುದು. ದೇವರು ಹೇಳಿದ್ದು, "ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವುದಕ್ಕೂ, ಕಾಯುವುದಕ್ಕೂ ಅದರಲ್ಲಿ ಇಟ್ಟನು. ಇದಲ್ಲದೆ ಯೆಹೋವ ದೇವರು ಆ ಮನುಷ್ಯನಿಗೆ ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು" (ಆದಿ. 2:15–17). ಹವ್ವಳು ಸರ್ಪಕ್ಕೆ ದೇವರ ಹೇಳಿಕೆ ತಿಳಿಸುವಂತದ್ದು ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು; ಆದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯವಾಗಿ ಇದನ್ನು ತಿನ್ನಲೂ ಕೂಡದು, ಮುಟ್ಟಲೂ ಕೂಡದು; ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ ಅಂದಳು (ಆದಿ. 3:2–3).

ಹವ್ವಳು ಸರ್ಪದ ಜೊತೆ ಮಾತನಾಡುವಾಗ ತಿನ್ನಲೂ ಬಾರದು, ಮುಟ್ಟಲೂ ಬಾರದೆಂಬ ಮಾತನ್ನು ಸೇರಿಸಿ ಹೇಳುವುದನ್ನು ಕಾಣಬಹುದು.

ಸೈತಾನನು ಚತುರನಾಗಿದ್ದಾನೆ. ಯಾವಾಗ ಒಬ್ಬ ದೇವರ ಮಗು ದೇವರ ವಚನದ ಕುರಿತು ಗಲಿಬಿಲಿಗೊಳಗಾಗಿದ್ದಾನೋ ಅವಾಗ ಅವನು ತನ್ನ ಕೆಲಸವನ್ನು ಆರಂಭಿಸುತ್ತಾನೆ. ನಾವು ದೇವರ ವಾಕ್ಯವನ್ನು ಚೆನ್ನಾಗಿ ಓದಿ, ಧ್ಯಾನಿಸಿ ಅಭ್ಯಾಸ ಮಾಡಿಕೊಳ್ಳುವವರಾಗಿರಬೇಕು. ಇಂದು ಲೋಕದಲ್ಲಿಯೂ ಕೂಡ ಅನೇಕ ವಿಧವಾದ ದುರ್ಭೋದನೆಗಳು ತುಂಬಿಕೊಂಡಿರುವುದನ್ನು ಕಾಣಬಹುದು. ಯೆಹೋವನ ಸಾಕ್ಷಿಗಳು, ಯೇಸು ನಾಮದವರು ಹೀಗೆ ಅನೇಕ ದುರ್ಭೋದಕರು ರಕ್ಷಣೆಹೊಂದಿ ಬೆಳೆಯುತ್ತಿರುವ ವಿಶ್ವಾಸಿಗಳನ್ನು ದೇವರ ವಾಕ್ಯಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ ಮೋಸಪಡಿಸುತ್ತಾರೆ. ಅವರು ದೇವರ ವಾಕ್ಯದಲ್ಲಿ ಬೆಳವಣಿಗೆ ಹೊಂದಿದ ವಿಶ್ವಾಸಿಗಳ ಬಳಿಗೆ ಯಾವತ್ತು ಬರುವುದಿಲ್ಲ. ತ್ರಯೇಕತ್ವವನ್ನು ಅಲ್ಲಗಳೆಯುವಂತಹ ಗುಂಪುಗಳ ಕುರಿತು ಕ್ರೈಸ್ತ ವಿಶ್ವಾಸಿಗಳು ತುಂಬಾ ಎಚ್ಚರಿಕೆಯುಳ್ಳವರಾಗಿರಬೇಕು. ಸುಮಾರು 7 ವರ್ಷಗಳ ಹಿಂದೆ ಒಂದು ವ್ಯಕ್ತಿ ನನಗೆ ಫೋನ್ ಕರೆಮಾಡಿ ಬಾಂಬೆಯಿಂದ 2 ಸಹೋದರರು ಬಂದಿದ್ದಾರೆ. ಅವರಿಗೆ ನಿಮ್ಮ ಆಶ್ರಮವನ್ನು ನೋಡಬೇಕು ಎಂದು ಕೇಳಿಕೊಂಡರು. ನಾನು ಅವರಿಗೆ ಹೇಳಿದೆ ಆಯಿತು ಕರೆದುಕೊಂಡು ಬನ್ನಿ. ಮರುದಿನ ನಾನು ತುಂಬಾ ಅವಸರದ ಕೆಲಸಗಳು ಇದ್ದರೂ ಅವರಿಗಾಗಿ ಸಮಯ ಮಾಡಿಕೊಂಡು ಕುಳಿತೆ. ಬೆಳಿಗ್ಗೆ 10 ಘಂಟೆ ಹೊತ್ತಿಗೆ ಈ ವ್ಯಕ್ತಿ ನಮ್ಮ ಮನೆಗೆ ಇಬ್ಬರು ಸಹೋದರರನ್ನು ಕರಕೊಂಡು ಬಂದರು. ಚಹಾ, ಉಪಹಾರ ಸೇವಿಸಿದ ನಂತರ ನಾನು ಅವರಿಗೆ ಆಶ್ರಮ ನೋಡಲು ಹೋಗೋಣ ಎಂದು ಹೇಳಿದೆ. ಆಗ ಅವರು

ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೇ ಇಟ್ಟುಕೊಂಡಿದ್ದೇನೆ; ಆತನು ನನ್ನ ಬಲಗಡೆಯಲ್ಲಿ ಇರುವದರಿಂದ ನಾನು ಎಂದಿಗೂ ಕದಲುವದಿಲ್ಲ (ಕೀರ್ತ. 16:8).

ಸತ್ಯವೇದ ತೆರೆದು ಸ್ವಲ್ಪ ದೇವರ ವಾಕ್ಯದ ಬಗ್ಗೆ ಗಮನಿಸೋಣ ಎಂದು ಹೇಳಿದರು. ಆಗ ನಾನು ಸಂಶಯಗೊಂಡು ಅವರ ಹೆಸರು ಕೇಳಿದೆ ಆಗ ಅವರು ನನ್ನ ಹೆಸರು ಹೀಗೆ ಎಂದು ಹೇಳಿದರು. ನನಗೆ ಆಗ ಗೊತ್ತಾಯಿತು ಅವರು ಯೇಸು ನಾಮದ ಬೊಂಬಾಯಿಯ ಸಭಾಪಾಲಕರೆಂದು ನಾನು ಅವರಿಗೆ ಹೇಳಿದೆ ದೇವರ ವಾಕ್ಯ ನೋಡುವುದರಿಂದ ಸುಮ್ಮನೆ ವಾಗ್ವಾದಗಳೇ ಆಗುತ್ತವೆ. ಯಾಕಂದರೆ ಯಾರೂ ಕೊನೆಯ ಹಂತಕ್ಕೆ ತಲುಪಲು ಸಾಧ್ಯವಿಲ್ಲ ಮತ್ತು ನೀವು ಹೇಳಿದ್ದನ್ನು ನಾನು ಒಪ್ಪುವುದಿಲ್ಲ ನಾನು ಹೇಳಿದ್ದನ್ನು ನೀವು ಒಪ್ಪುವುದಿಲ್ಲ ಆದ್ದರಿಂದ ಸಮಯ ವ್ಯರ್ಥ ಅದಕ್ಕಿಂತ ಎಲ್ಲಾದರೂ ಹೋಗಿ 4 ಜನರಿಗೆ ಸುವಾರ್ತೆ ಹೇಳಿದರೆ ಅವರಾದರೋ ರಕ್ಷಣೆ ಹೊಂದಬಹುದು ಎಂದು ಹೇಳಿದೆ. ಅದಕ್ಕೆ ಅವರು ಪಟ್ಟು ಬಿಡದೆ ನಾವು ಹೇಳುವಂತದ್ದು ಸತ್ಯವೇದದಲ್ಲಿ ಇದ್ದರೆ ನೀವು ಒಪ್ಪಿಕೊಳ್ಳಬೇಕು. ನೀವು ಹೇಳಿದ್ದು ಸತ್ಯವೇದದಲ್ಲಿ ಇದ್ದರೆ ನಾವು ಒಪ್ಪಿಕೊಳ್ಳುತ್ತೇವೆ. ಮಾತನಾಡೋಣ ಎಂದು ಹೇಳಿದರು. ಕೊನೆಗೆ ನಾನು ಅವರಿಗೆ ಆಯಿತು ಎಂದು ಒಪ್ಪಿಗೆ ಸೂಚಿಸಿದೆ. ನಾನು ಅವರಿಗೆ ಮೊದಲು ನೀವು ಏನು ಹೇಳಲು ಬಯಸುತ್ತಿರೋ ಹೇಳಿ ಎಂದು ಹೇಳಿದೆ ಅವರು ಮಾತನಾಡಲು ಆರಂಭಿಸಿದರು. ಸುಮಾರು ಒಂದು ಘಂಟೆಗಳ ಕಾಲ ಅವರ ಮಾತುಗಳನ್ನು ಕೇಳಿದ ಮೇಲೆ ಅವರಿಗೆ ನಾನು ಹೇಳಿದೆ ಈಗ ನಾನು ಮಾತನಾಡುತ್ತೇನೆ. ನಾನು ಮೊದಲನೇದಾಗಿ ಕೇಳಿದ ಪ್ರಶ್ನೆಗೆ ಅವರಿಗೆ ಉತ್ತರಿಸಲಿಕ್ಕೆ ಸಾಧ್ಯವಾಗದೇ ತಡವರಿಸಿದರು. ಇಲ್ಲಿವರೆಗೆ ಮಾತನಾಡಲು ಬಂದ ಅವರು ನಮಗೆ ಹೋಗಬೇಕೆಂದು ಅವಸರದಿಂದ ಏಳಲು ನೋಡಿದರು ನಾನು ಹೇಳಿದೆ. ಸುಮಾರು ಒಂದು ಘಂಟೆಗಳ ಕಾಲ ನೀವು ಮಾತನಾಡಿದ್ದನ್ನು ನಾನು ಕೇಳಿದ್ದೇನೆ ಈಗ ನನ್ನ ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳಲು ಏನು ಉತ್ತರ ಹೇಳಲಾರದೆ ತಡವರಿಸಿ ಹೊರಟು ಹೋದರು. ಕರ್ತನಾದ ಯೇಸುಕ್ರಿಸ್ತನ ಬಳಿಗೆ ಸೈತಾನನು ವಾಕ್ಯದ ಮೂಲಕವೇ ಬಂದ. ಯೇಸುಕ್ರಿಸ್ತನ ಹೃದಯದಲ್ಲಿ ಅಸ್ಪಷ್ಟವಾದ ಅಲ್ಲ, ಸ್ಪಷ್ಟವಾದ ವಾಕ್ಯಗಳಿತ್ತು. ಆದುದರಿಂದ ಸೈತಾನನು ಕರ್ತನನ್ನು ಜಯಿಸಲಾಗಲಿಲ್ಲ. ಇಂದು ನೀವು ಹೊಂದಿದ ರಕ್ಷಣೆಯನ್ನು ಮತ್ತು ದೇವರಿಂದ ಹೊಂದಿದ ಆಶೀರ್ವಾದಗಳನ್ನು ಕಸಿದುಕೊಳ್ಳಲು ಸೈತಾನನು ಅಸ್ಪಷ್ಟವಾದ ದೇವರ ವಚನ ತೆಗೆದುಕೊಂಡು ದುರ್ಬೋಧಕರ ಮೂಲಕ ಬರುತ್ತಾನೆ. ನಿನ್ನ ಹೃದಯದಲ್ಲಿ ಸ್ಪಷ್ಟವಾದ ದೇವರ ವಚನಗಳು ಇರುವುದಾದರೆ ನೀನು ಅವನನ್ನು ಜಯಿಸಲು ಸಾಧ್ಯ. "ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ ಮತ್ತು ಪ್ರಾಪಂಚಿಕ ಬುದ್ಧಿಯಿಂದ ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ, ಆದರೆ ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ. ಇಂಥವರು ನಿಮಗೆ ದೊರಕಿರುವ ಬಿರುದನ್ನು ಅಪಹರಿಸುವುದಕ್ಕೆ ಅವಕಾಶಕೊಡಬೇಡಿರಿ" (ಕೊಲೊ. 2:19).

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**


## ಬೇಕಾಗಿದ್ದಾರೆ

- **ಜಿಎನ್ಎಮ್ ನರ್ಸ್**
- **ಸ್ಟಾಫ್ ನರ್ಸ್**
- **ಎಮ್ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**9902334941, 0820 2002781.**


ಸನ್ಮಾರ್ಗವನ್ನು ಲಕ್ಷಿಸಿ ನಡೆಯುವೆನು; ನನಗೆ ಯಾವಾಗ ದರ್ಶನಕೊಡುವಿ? ಮನೆಯೊಳಗೂ ಯಥಾರ್ಥ ಹೃದಯದಿಂದಲೇ ಪ್ರವರ್ತಿಸುವೆನು (ಕೀರ್ತ. 101:2).

# ಶರೀರ – ಆತ್ಮ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

"ಯೆಹೋವನಿಗೋಸ್ಕರ ಯಜ್ಞವೇದಿಯನ್ನು ಕಟ್ಟಿಸಿ ಆತನ ಹೆಸರನ್ನು ಹೇಳಿಕೊಂಡು ಆರಾಧಿಸಿದನು" (ಆದಿ. 12:8).

ಆರಾಧನೆ ಎಂಬ ಪದಕ್ಕೆ ಅನೇಕ ಅರ್ಥಗಳುಂಟು. ಅಡ್ಡಬೀಳುವುದು, ನಮಸ್ಕರಿಸುವುದು, ಸೇವಿಸುವುದು ಈ ರೀತಿ ಅನೇಕ ಅರ್ಥಗಳನ್ನು ಹೇಳಬಹುದು. ಆರಾಧನೆ ಎಂದರೆ ನಾವು ದೇವರಿಂದ ಪಡೆದುಕೊಳ್ಳುವುದು ಅಲ್ಲ ಬದಲಾಗಿ ದೇವರಿಗೆ ಕೊಡುವುದು. ಅಂದರೆ ದೇವರಿಗೆ ಬೆಲೆ ಬಾಳುವ ಅಥವಾ ಶ್ರೇಷ್ಟ ಸಂಗತಿಗಳನ್ನು ಕೊಡುವುದಾಗಿದೆ. ಆರಾಧನೆ ಎಂಬುದು ದೇವರೊಂದಿಗೆ ಸಂಬಂಧವನ್ನುಂಟು ಮಾಡುವುದು, ಆತನನ್ನು ಘನಪಡಿಸುವುದಾಗಿದೆ. ಆದಿಕಾಂಡ 22 ಅಧ್ಯಾಯದಲ್ಲಿ 1–14 ವಾಕ್ಯದಲ್ಲಿ ಮುಖ್ಯವಾಗಿ 8 ಅಂಶಗಳಲ್ಲಿ ನಿಜವಾಗಿ ಆರಾಧನೆ ಏನಾಗಿದೆ ಎಂಬುದಾಗಿ ತಿಳಿಯಬಹುದಾಗಿದೆ.

**ವಯಸ್ಕರ ಸ್ವರ**

1) ಆದಿ. 22:1 :– ಆರಾಧನೆಯು ಪರಿಶೋಧನೆಯನ್ನು ಒಳಗೊಂಡಿದೆ. ಭಕ್ತನಾದ ಯೋಬನು ಎಲ್ಲವನ್ನು ಕಳಕೊಂಡ ಸ್ಥಿತಿಯಲ್ಲಿ ಯಥಾರ್ಥವಾಗಿ ಆರಾಧಿಸಿದನು. "ಯೋಬನು ನೆಲದಲ್ಲಿ ಅಡ್ಡಬಿದ್ದು ನಮಸ್ಕರಿಸಿ ಏನೂ ಇಲ್ಲದವನಾಗಿ ತಾಯಿಯ ಗರ್ಭದಿಂದ ಬಂದೆನು; ಏನೂ ಇಲ್ಲದವನಾಗಿಯೇ ಗತಿಸಿಹೋಗುವೆನು; ಯೆಹೋವನೇ ಕೊಟ್ಟನು, ಯೆಹೋವನೇ ತೆಗೆದುಕೊಂಡನು; ಯೆಹೋವನ ನಾಮಕ್ಕೆ ಸ್ತೋತ್ರವಾಗಲಿ" (ಯೋಬ. 1:20–22). ನಾನು ಯಾವ ಪರಿಸ್ಥಿತಿಯಲ್ಲಿ ಆರಾಧಿಸುತ್ತೇವೆ ಎಂಬುದು ಮುಖ್ಯ. ಅಬ್ರಹಾಮನು ತನ್ನ ಏಕೈಕ ಪುತ್ರನಾದ ಇಸಾಕನನ್ನೇ ದೇವರಿಗೆ ಬಲಿಯರ್ಪಿಸಿ ಆರಾಧನೆಗೆ ಸಿದ್ಧಪಡಿಸುವಾಗ ಆತನ ಸ್ಥಿತಿಯು ಯಾವ ರೀತಿ ಇರಬಹುದು?

ಪ್ರಿಯನೇ ಆರಾಧನೆಗೆ ಬರುವಾಗ ನೀನು ಕೂಡಾ ಅನೇಕ ತಡೆಗಳು, ಹೋರಾಟಗಳು ಎದುರಿಸಬಹುದು. ಲೂಕ 7ನೇಯ ಅಧ್ಯಾಯದಲ್ಲಿ ಯೇಸು ಫರಿಸಾಯನಾದ ಸೀಮೋನನ ಮನೆಯಲ್ಲಿ ಊಟಕ್ಕೆ ಒರಗಿದ್ದಾಗ ದುರಾಚಾರಿ ಹೆಂಗಸು ಆತನ ಬಳಿ ಬಂದು ಸುಗಂಧ ತೈಲವನ್ನು ಸುರಿದು ಆತನನ್ನು ಆರಾಧಿಸುವುದನ್ನು ನಾವು ಕಾಣಬಹುದು. ಆಕೆ ಬೆಲೆ ಬಾಳುವ ಸುಗಂಧ ತೈಲವನ್ನು ಹಚ್ಚಿ ಆತನಿಗೆ ಅಡ್ಡಬೀಳುವುದನ್ನು ನಾವು ಕಾಣಬಹುದು. ಸಿಮೋನನ ಮನೆಯಲ್ಲಿ ದುರಾಚಾರಿ ಹೆಂಗಸನ್ನು ಯಾರೂ ಆಹ್ವಾನಿಸಲಿಲ್ಲ. ಅಲ್ಲಿ ಆಕೆಗೆ ಅವಮಾನವಾಗಬಹುದು ಎಂದು ಆಕೆಗೆ ಗೊತ್ತಿದಿರಬಹುದು. ಅಲ್ಲಿರುವವರೂ ತಿರಸ್ಕಾರ ಮಾಡಬಹುದು ಎಂದು ತಿಳಿದಿದ್ದರೂ ಯೇಸುವಿನ ಪ್ರೀತಿಯ ನಿಮಿತ್ತವಾಗಿ ಅವಮಾನವನ್ನು ಲೆಕ್ಕಿಸದೆ ತನ್ನ ಬಳಿಯಿರುವ ಶ್ರೇಷ್ಠ ತೈಲವನ್ನು ಆತನಿಗೆ ಅರ್ಪಿಸಿದಳು. ಕೆಲವರು ಈ ದಿನಮಾನಗಳಲ್ಲಿ ಚಿಕ್ಕ ಚಿಕ್ಕ ನೆವಹೇಳಿಕೊಂಡು ಆರಾಧನೆಯನ್ನು ತಪ್ಪಿಸಿಕೊಳ್ಳುವರು. ಅವರು ನನ್ನ ಬಳಿ ಮಾತನಾಡುವುದಿಲ್ಲ, ಪಾಸ್ಟರ್ ನನ್ನನ್ನು ಸರಿಯಾಗಿ ಗಮನಿಸುವುದಿಲ್ಲ, ಸಿಸ್ಟರ್ ನನ್ನನ್ನು ವಿಚಾರಿಸುವುದಿಲ್ಲ ಎಂದು ಪಿಳ್ಳೆ ನೆವಮಾಡಿ ಭಾನುವಾರ ಆರಾಧನೆಯನ್ನು ತಪ್ಪಿಸುವವರಾಗಿರುತ್ತಾರೆ. ದುರಾಚಾರಿ ಹೆಂಗಸು ಯೇಸುವನ್ನು ಸಂಧಿಸಲು ಆಸೆಯಿಂದ ಅವಮಾನ, ಮಾತುಗಳನ್ನು ಲೆಕ್ಕಿಸದೆ ಆತನ ಬಳಿ ಹೋದಳು. ಪ್ರಿಯ ದೇವ ಮಗುವೆ ನೀನು ಯಾರಿಗಾಗಿ ಸಭೆಗೆ ಹೋಗುತ್ತಿ? ಮನುಷ್ಯರನ್ನು ನೋಡಿಯೋ ಅಥವಾ ನಿನಗಾಗಿ ಪ್ರಾಣಕೊಟ್ಟ ಯೇಸುಗಾಗಿಯೋ? ಆರಾಧನೆಯು ಪರಿಶೋಧನೆಯನ್ನು ಒಳಗೊಂಡಿದೆ. ಅನೇಕ ವೇಳೆ ನಾವು ಆರಾಧನೆಗೆ ಹೊರಟು ಬರುವಾಗ ಮನೆಯಲ್ಲಿಯೋ ಅಥವಾ ಬರುವ ದಾರಿಯಲ್ಲೋ ಅನೇಕ ಅಡ್ಡಿಗಳು ಉಂಟಾಗುವುದು ಸಹಜ. ಅದನ್ನೆಲ್ಲಾ ಬದಿಗೊತ್ತಿ ಕ್ರಿಸ್ತನ ಪ್ರೀತಿಯನ್ನು ನೆನೆಸಿ ಬರಲು ಸಿದ್ಧನಾಗುವೆಯಾ? "ಯೆಹೋವನ ಆಲಯದ ಅಂಗಳಗಳಲ್ಲಿ ಸೇರಬೇಕೆಂದು ನನ್ನ ಆತ್ಮವು ಹಂಬಲಿಸುತ್ತಾ ಕುಂದಿಹೋಗಿತ್ತು. [ಆದರೆ ಈಗ] ಚೈತನ್ಯ ಸ್ವರೂಪನಾದ ದೇವರಿಗೆ ನನ್ನ ತನು ಮನಗಳಿಂದ ಹರ್ಷಧ್ವನಿ ಮಾಡುತ್ತೇನೆ" (ಕೀರ್ತ. 84:2).

2) **ಪ್ರಿಯವಾದುದ್ದನ್ನೇ ದೇವರಿಗೆ ಅರ್ಪಿಸಿ ಆರಾಧಿಸುವುದು** :– (ಆದಿ. 22:2) ದೇವರು ಅಬ್ರಹಾಮನಿಗೆ ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನೂ ನನಗೆ

ಉತ್ಸಾಹ ಧ್ವನಿಯೂ ಜಯಘೋಷವೂ ನೀತಿವಂತರ ಗುಡಾರಗಳಲ್ಲಿವೆ;
ಯೆಹೋವನ ಬಲಗೈ, ಪರಾಕ್ರಮಗಳನ್ನು ನಡಿಸುತ್ತದೆ (ಕೀರ್ತ. 118:15).

ಅರ್ಪಿಸಿ ಆರಾಧಿಸು ಎಂಬುವುದಾಗಿ ಹೇಳಿರುವುದನ್ನು ಗಮನಿಸೋಣ. ದೇವರಿಗಿಂತ ಪ್ರಿಯವಾದುದ್ದು ನಮ್ಮಲ್ಲಿರುವುದಾದರೆ ಅದರಿಂದ ನಮಗೆ ಶೋಧನೆ ಬರುವುದು ಸಹಜ. ಕರ್ತನನ್ನು ಪೂರ್ಣ ಹೃದಯ, ಪ್ರಾಣ, ಬುದ್ಧಿ, ಶಕ್ತಿಯಿಂದ ಪ್ರೀತಿಸಬೇಕೆಂಬ ಆಜ್ಞೆ ತಿಳಿದು ನಾವು ಆತನಿಗಿಂತ ಪ್ರಿಯವಾದುದ್ದನ್ನು ನಮ್ಮ ಬಳಿಯಲ್ಲಿರಿಸುವುದಾದರೆ ಆ ಪ್ರೀತಿ ನಿಜವಾದ ಪ್ರೀತಿಯಾಗುವುದಿಲ್ಲ. ಈ ದಿನಮಾನಗಳಲ್ಲಿ ಅನೇಕರು ಮೊಬೈಲ್ ಪ್ರಿಯರು ದಿನದ ಎಲ್ಲ ಸಮಯದಲ್ಲಿ ಅದರಲ್ಲಿ ಸಮಯ ಕಳೆದುಕೊಂಡು ಪ್ರಾರ್ಥನೆ, ಆರಾಧನೆಗೆ ಸಮಯ ಕೊಡುವವರಿರುತ್ತಾರೆ. ಪ್ರಿಯ ದೇವ ಮಗುವೆ ನಿನ್ನ ಮೊಬೈಲ್ ನಿನಗೆ ಯೇಸುವಿಗಿಂತ ಪ್ರಿಯವಾಗಿರುವುದಾದರೆ ನೀನು ಅದನ್ನು ಕಳೆದುಕೊಳ್ಳುತ್ತೀ ಎಚ್ಚರಿಕೆ. ಒಬ್ಬ ಸಹೋದರನು ದೇವರ ಕೃಪೆಯಿಂದ ಒಳ್ಳೆ ಉದ್ಯೋಗವನ್ನು ಹೊಂದಿ ಉತ್ತಮ ಸ್ಥಿತಿಗೆ ಬಂದನು. ಆದರೆ ಕೆಲಸ ಒದಗಿಸಿದ ದೇವರನ್ನು ಮರೆತು ಉದ್ಯೋಗವನ್ನೇ ಆರಾಧಿಸತೊಡಗಿದ ಒಂದು ದಿನ ಆ ಉದ್ಯೋಗವನ್ನು ಕಳೆದುಕೊಂಡು ತುಂಬಾ ಸಂಕಟಕ್ಕೆ ಒಳಪಟ್ಟದ್ದನ್ನು ನಾನು ಕಂಡಿದ್ದೇನೆ. “ನನ್ನ ನಾಮವನ್ನು ಘನಪಡಿಸಬೇಕೆಂಬ ಆಜ್ಞೆಯನ್ನು ನೀವು ಆಲಿಸಿ ಮಂದಟ್ಟು ಮಾಡಿಕೊಳ್ಳದಿದ್ದರೆ ನಾನು ನಿಮಗೆ ಶಾಪವನ್ನು ಬರಮಾಡುವೆನು, ನಿಮಗೆ ಆಶೀರ್ವಾದವಾಗಿ ದಯಪಾಲಿಸಿದವುಗಳನ್ನೂ ಶಪಿಸುವೆನು” (ಮಲಾ. 2:2).

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.



# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಪಾಕ್ ಪ್ರೇರಿತ ಉಗ್ರರಿಗೆ ಮೋದಿ ಅಲೆ ಸಿಂಹ ಸ್ವಪ್ನವಾಗಿ ಪರಿಣಮಿಸಿದೆ. ಜಮ್ಮು ಕಾಶ್ಮೀರ ಚುನಾವಣೆಯನ್ನು ಸವಾಲಾಗಿ ಪರಿಗಣಿಸಿರುವ ಭಾರತೀಯ ಜನತಾ ಪಕ್ಷ, ಇಲ್ಲಿ ಗೆಲ್ಲಲು ಶಕ್ತಿಮೀರಿ ಯತ್ನಿಸುತ್ತಿದೆ. ಒಂದು ವೇಳೆ ಕಾಶ್ಮೀರದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದರೆ ಕಾಶ್ಮೀರಕ್ಕೆ ನೀಡಿರುವ ವಿಶೇಷ ಅಧಿಕಾರ (ಸಂವಿಧಾನದ 370ನೇ ವಿಧಿ) ರದ್ದಾಗುವ ಸಾಧ್ಯತೆಗಳಿವೆ.

- ರಾಜ್ಯದ ವಿವಿಧೆಡೆ ಶಾಲಾ ಬಾಲಕಿಯರ ಮೇಲೆ ಅತ್ಯಾಚಾರ, ಲೈಂಗಿಕ ಶೋಷಣೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಶಾಲೆಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರಾ ಅಳವಡಿಸುವುದು ಸೇರಿ ಹಲವು ಮಾರ್ಗಸೂಚಿಗಳನ್ನು ಜಾರಿಗೆ ತರಲಾಗಿದೆ.

- ಬಾಹ್ಯಾಕಾಶಕ್ಕೆ ನಾಗರಿಕ ವಿಮಾನಯಾನ ಕೈಗೊಳ್ಳುವ ಕನಸನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ವರ್ಜಿನ್ ಸಮೂಹ ಸಂಸ್ಥೆಯ ಮುಖ್ಯಸ್ಥ ರಿಚರ್ಡ್ ಬ್ರಾನ್ಸನ್ ಹೇಳಿದ್ದಾರೆ.

- ಇಂಡೋನೇಷ್ಯಾದ ಸಮುದ್ರದ ಆಳದಲ್ಲಿ 7.3 ತೀವ್ರತೆಯ ಭೂಕಂಪ ಶನಿವಾರ ಸಂಭವಿಸಿದ್ದು, ಸುನಾಮಿ ಆತಂಕ ಎದುರಾಗಿದೆ. ಸಣ್ಣ ಪ್ರಮಾಣದ ಅಲೆಗಳು ಹಾಗೂ ಜನರಲ್ಲಿ ತೀವ್ರ ಭೀತಿಯ ಹೊರತಾಗಿ ಯಾವುದೇ ಹಾನಿ ಸಂಭವಿಸಿಲ್ಲ.

- ಧೂಮಕೇತುವಿನ ಮೇಲೆ ಇಳಿದಿದ್ದ ಯುರೋಪಿಯನ್ ಸ್ಪೇಸ್ ಏಜೆನ್ಸಿಯ ಫಿಲೆ ರೋಬೋಟ್ ಕಾರ್ಯಸ್ಥಗಿತಗೊಳಿಸಿದೆ. 10 ವರ್ಷಗಳ ಸುದೀರ್ಘ ಪ್ರಯಾಣದ ಬಳಿಕ ಧೂಮಕೇತುವಿನ ಮೇಲೆ ಇಳಿದಿದ್ದ ಫಿಲೆ, ತಾಂತ್ರಿಕ ತೊಂದರೆಯಿಂದ ನಿಧಾನವಾಗಿ ಇಳಿಯುವ ಬದಲು, ವೇಗವಾಗಿ ಅಪ್ಪಳಿಸಿದೆ.

- ರಕ್ತದೊತ್ತಡ, ನೋವು, ಎಚ್‌ಐವಿ, ನ್ಯುಮೋನಿಯಾ ಮತ್ತಿತರ ರೋಗಗಳ ಉಪಶಮನಕ್ಕೆ ಬಳಸಲಾಗುವ ಔಷಧಿಗಳ ಬೆಲೆ ಮುಂದಿನ ಕೆಲದಿನಗಳಲ್ಲಿ ಇಳಿಕೆಯಾಗುವ ಸಾಧ್ಯತೆ ಇದೆ. ಹೆಚ್ಚು ಮಾರಾಟವಾಗುವ ಹಾಗೂ ಜನಸಾಮಾನ್ಯರಿಗೆ ಅವಶ್ಯವಾಗಿರುವ 100 ಔಷಧಗಳ ಬೆಲೆ ನಿಯಂತ್ರಣ ಕುರಿತು ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯೊಂದನ್ನು ಕಳಿಸಿದ್ದು, ಸದ್ಯದಲ್ಲೇ ಇದಕ್ಕೆ ಅನುಮೋದನೆ ದೊರೆಯುವ ಸಾಧ್ಯತೆ ಇದೆ.

ನಿನ್ನ ಸಂಗಡ ಊಟದ ಮಣೆಯ ಸುತ್ತಲೂ ಕೂತುಕೊಳ್ಳುವ ನಿನ್ನ ಮಕ್ಕಳು
ಎಣ್ಣೇ ಮರದ ಸಸಿಗಳಂತಿರುವರು (ಕೀರ್ತ. 128:3).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟ್ರರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

**ನಮ್ಮ ವಿಳಾಸ :**
**ಸಂಪಾದಕರು, 'ದೇವರ ಸ್ವರ', ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Email : editor_voiceofgod@hotmail.com
Website : www.divinegen.org www.dgmbethelchurch.org

**ನಮ್ಮ ಕಛೇರಿ ವಿಳಾಸ :**
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) ಕಷ್ಟ ಸಂಕಷ್ಟಗಳಲ್ಲಿ ದೃಢತೆ :– ನಾವು ಕರ್ತನಿಗಾಗಿ ಮೀಸಲಾಗಿರುವುದರಿಂದ ನಮ್ಮ ಈ ಲೋಕದ ಜೀವಿತದಲ್ಲಿ ಎಷ್ಟೇ ಕಷ್ಟಗಳು, ಸಂಕಟಗಳು ಬಂದರೂ ಸೋತು ಹೋಗದೆ ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕು. ಶದ್ರಕ್, ಮೇಶಕ್, ಅಬೇದನೆಗೋ ಎಂಬ ಭಕ್ತರು ಅವರ ನಂಬಿಕೆಗೆ ವಿರುದ್ಧವಾಗಿ ಶೋಧನೆ ಬಂದಾಗ ಸಾಯಲು ಸಿದ್ಧರಾದರು ಆದರೆ ನಂಬಿಕೆ ಬಿಡಲಿಲ್ಲ (ದಾನಿ. 3:15–17).

**ಕ್ರೈಸ್ತ ವಿಶ್ವಾಸಿಗೆ ಕಷ್ಟಗಳು ಯಾಕೆ ಬರುತ್ತದೆ ?**

1) ನಮ್ಮನ್ನು ಪರೀಕ್ಷಿಸಲು (ಧರ್ಮೋ. 8:2–5).

2) ದ್ವಿಗುಣವಾದ ಆಶೀರ್ವಾದ ಹೊಂದಲು (ಯೋಬ. 42:10).

3) ದೇವರಿಂದ ತಪ್ಪಿ ಹೋಗದೆ ಇರಲು (ಕೀರ್ತ. 119:67).

4) ದೇವರ ನಿಬಂಧನೆಗಳನ್ನು ಕಲಿಯಲು (ಕೀರ್ತ. 119:71).

5) ಹಿಂಜಾರುವಿಕೆಯ ಅನುಭವದಿಂದ ದೇವರ ಕಡೆಗೆ ತಿರುಗಲು (ಆಮೋ. 4:6–10).

6) ದೇವರ ರಾಜ್ಯ ಪ್ರವೇಶಿಸಲು (ಅ.ಕೃ. 14:22).

7) ದೇವರ ಪ್ರೀತಿಯಿಂದ ತಪ್ಪಿಸಲು (2 ಕೊರಿ. 11:1–3).

"ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ" (ರೋಮ. 8:28). "ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು; ಅವನು ಪರಿಶೋಧಿತನಾದ ಮೇಲೆ ಜೀವವೆಂಬ ಜಯಮಾಲೆಯನ್ನು ಹೊಂದುವನು; ಸ್ವಾಮಿಯು ತನ್ನನ್ನು ಪ್ರೀತಿಸುವವರಿಗೆ ಇದನ್ನು ವಾಗ್ದಾನ ಮಾಡಿದ್ದಾನೆ" (ಯಾಕೋ. 1:12).

**ಕ್ರೈಸ್ತ ವಿಶ್ವಾಸಿಗಳು ಕಷ್ಟ ಸಂಕಟಗಳು ಬರುವಾಗ ಏನು ಮಾಡಬೇಕು?**

1) ಸತತವಾಗಿ ಪ್ರಾರ್ಥಿಸಬೇಕು (ಲೂಕ. 18:1, ರೋಮ. 12:11–12).

2) ಕರ್ತನನ್ನು ಸ್ತುತಿಸಬೇಕು (ಯೋಬ. 1:21, ಫಿಲಿ. 4:4–7, 1 ಥೆಸ. 5:17–18).

3) ಕರ್ತನ ಮೇಲೆ ತಪ್ಪು ಹೊರಿಸಬಾರದು (ಯೋಬ. 1:22).

4) ಕರ್ತನಲ್ಲಿ ಬಲಹೊಂದಬೇಕು (1 ಸಮು. 30:1–8, ಫಿಲಿ. 4:13).

5) ಕಷ್ಟಗಳು ಆನಂದಕರವೆಂದೆಣಿಸಬೇಕು (ಯಾಕೋ. 1:2–4, 1 ಪೇತ್ರ. 4:13).

6) ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕು (1 ಪೇತ್ರ. 5:8–11).

7) ಆಶ್ಚರ್ಯಪಡಬಾರದು (1 ಪೇತ್ರ. 4:12).

8) ಕುಗ್ಗಿ ಹೋಗಬಾರದು (ಕೀರ್ತ. 43:5).

9) ಕರ್ತನನ್ನು ನಿರೀಕ್ಷಿಸಬೇಕು (ಯೆಶಾ. 49:23).

10) ನೀತಿ ಕರ್ತನಾದ ದೇವರ ಕೈಗಳಲ್ಲಿ ಎಲ್ಲವನ್ನೂ ಒಪ್ಪಿಸಬೇಕು (1 ಪೇತ್ರ. 2:23).

5) ನಮ್ಮ ಜೀವಿತದಲ್ಲಿ ದೇವರ ವಾಕ್ಯಕ್ಕೆ ಆಧಾರವಿಲ್ಲದ ಎಲ್ಲವನ್ನು ತೊರೆಯಲು ಸಿದ್ಧರಾಗಿರಬೇಕು :– "ಕರ್ತನಾದ ಯೇಸುವಿನ ಹೆಸರು ಪ್ರಖ್ಯಾತಿಗೆ ಬಂತು. ಆತನನ್ನು ನಂಬಿದವರಲ್ಲಿ ಅನೇಕರು ಬಂದು ತಮ್ಮ ಕೃತ್ಯಗಳನ್ನು ಒಪ್ಪಿಕೊಂಡು ತಿಳಿಸಿದರು. ಇದಲ್ಲದೆ ಮಾಟ ಮಂತ್ರಗಳನ್ನು ನಡಿಸಿದವರಲ್ಲಿ ಅನೇಕರು ತಮ್ಮ ಪುಸ್ತಕಗಳನ್ನು ತಂದು ಕೂಡಿಸಿ ಎಲ್ಲರ ಮುಂದೆ ಸುಟ್ಟು ಬಿಟ್ಟರು. ಅವುಗಳ ಕ್ರಯವನ್ನು ಲೆಕ್ಕಮಾಡಿ ಐವತ್ತು ಸಾವಿರ ಬೆಳ್ಳೀ ನಾಣ್ಯ ಆಯಿತೆಂದು ತಿಳಿದುಕೊಂಡರು. ಈ ರೀತಿಯಾಗಿ ಕರ್ತನ ವಾಕ್ಯವು ಬಹಳವಾಗಿ ಹೆಚ್ಚುತ್ತಾ ಪ್ರಬಲವಾಯಿತು" (ಅ.ಕೃ. 19:18–20).

"ಇಸ್ರಾಯೇಲರು ತಿರುಗಿ ಯೆಹೋವನಿಗೆ ನಾವು ಪಾಪ ಮಾಡಿದ್ದೇವೆ; ನಿನಗೆ ಸರಿ ಕಾಣುವ ಪ್ರಕಾರ ನಮಗೆ

ಮಾಡು; ಆದರೆ ಈ ಸಾರಿ ಹೇಗೂ ನಮ್ಮನ್ನು ರಕ್ಷಿಸಬೇಕು ಎಂದು ಮೊರೆಯಿಟ್ಟು ಅನ್ಯದೇವತೆಗಳನ್ನು ತಮ್ಮಲ್ಲಿಂದ ತೆಗೆದು ಹಾಕಿ ಯೆಹೋವನನ್ನು ಸೇವಿಸುವವರಾದರು. ಆಗ ಆತನ ಮನಸ್ಸು ಇಸ್ರಾಯೇಲರ ಸಂಕಟದ ನಿಮಿತ್ತ ಬಲು ನೊಂದಿತು" (ನ್ಯಾಯ. 10:15–16).

ದೇವರ ವಾಕ್ಯಕ್ಕೆ ಆಧಾರವಿಲ್ಲದಿರುವ ಸಂಪ್ರದಾಯಗಳು, ವಿಗ್ರಹಗಳು, ಮಾಂತ್ರಿಕ ಪೂಜಾ ಸಾಮಗ್ರಿಗಳು, ವಾಕ್ಯಾಧಾರವಿಲ್ಲದ ಕ್ರೈಸ್ತ ಆರಾಧನಾ ವಿಧಿಗಳು ಎಲ್ಲವನ್ನು ತೊರೆಯಲು ನಾವು ಸಿದ್ಧರಾಗಿರಬೇಕು.

6) **ಸಮರ್ಪಣೆಯಲ್ಲಿ ದೃಢಚಿತ್ತರಾಗಿರಬೇಕು** :– ಈ ಎಲ್ಲಾ ಭಕ್ತರು ತಮ್ಮ ಸಮರ್ಪಣೆಯಲ್ಲಿ ದೃಢಚಿತ್ತರಾಗಿದ್ದರು (ದಾನಿ. 1:8, ಆದಿ. 14:21–23, ಯೋಬ. 31:1, 2 ಅರ. 5:15–16).

7) **ಅನ್ಯರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬಾರದು** (ಧರ್ಮೋ. 7:2). ಅನ್ಯದೇವತೆಗಳ ಪೂಜೆಗಳಲ್ಲಿ ಭಾಗವಹಿಸುವುದು ಅಥವಾ ಅನ್ಯದೇವತೆಗಳ ಪೂಜಾ ಕಾರ್ಯಗಳಿಗೆ ಹೊರೆ, ಕಾಣಿಕೆ, ವಸ್ತುಗಳನ್ನು ಕೊಡುವುದು, ಅನ್ಯರ ಹಬ್ಬಗಳಿಗೆ ಭಾಗವಹಿಸುವುದು ಇತ್ಯಾದಿ.

8) **ಅನ್ಯರೊಂದಿಗೆ ಸೇರಿಕೊಳ್ಳಬಾರದು** (ಯೆಹೋ. 23:7):– ಅಂದರೆ ಅನ್ಯರು ಮಾಡುವ ಪ್ರಕಾರ ನಾವು ಮಾಡುವುದು ಅವರು ತಪ್ಪಾದ ಕಾರ್ಯಗಳನ್ನು ಮಾಡುವಾಗ ಅವರೊಂದಿಗೆ ನಾವು ಕೂಡ ಸೇರಿ ಭಾಗವಹಿಸುವುದು. "ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ. ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಕರ್ತನಿಗೆ ಮೆಚ್ಚಿಗೆಯಾದದ್ದು, ಏನೆಂಬದನ್ನು ಪರಶೋಧಿಸಿ ತಿಳುಕೊಳ್ಳಿರಿ. ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ. ಆ ಜನರು ರಹಸ್ಯವಾಗಿ ನಡಿಸುವ ಕೆಲಸಗಳನ್ನು ಕುರಿತು ಮಾತಾಡುವುದಾದರೂ ನಾಚಿಕೆಗೆ ಕಾರಣವಾಗಿದೆ. ಬೆಳಕಿನಿಂದ ಎಲ್ಲಾ ಕೃತ್ಯಗಳ ನಿಜಗುಣ ತೋರಿಬರುತ್ತದೆ; ಆದರಿಂದ ಕೆಟ್ಟದ್ದು ಕೆಟ್ಟದ್ದೇ ಎಂದು ಕಾಣಿಸುವುದು. ಪ್ರಕಟವಾಗಿರುವುದೆಲ್ಲಾ ಬೆಳಕಿಗೆ ಸಂಬಂಧವಾದದ್ದು" (ಎಫೆ. 5:8–13).

9) **ಲೋಕವನ್ನು ಪ್ರೀತಿ ಮಾಡಬಾರದು** :– "ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕು ಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು" (1 ಯೋಹಾ. 2:15–17).

10) **ಸಾಯುವವರೆಗೂ ನಂಬಿಗಸ್ಥರಾಗಿರಬೇಕು** :– (ಪ್ರಕ. 2:10) ನಂಬಿಗಸ್ತಿಕೆ ಅಂದರೆ

1. ಸತ್ಯ ಸಂಧತೆ (ಪ್ರಲಾ. 3:23).
2. ಸತ್ಯತೆ (ಕೀರ್ತ. 89:8, 89:24).
3. ನಂಬಿಕೆ (ವಿಶ್ವಾಸ) (ಜ್ಞಾನೋ. 13:17).
4. ನಿರ್ವಂಚನೆ (2 ಪೂರ್ವ. 31:12).
5. ಪ್ರಮಾಣಿಕತೆ (ಯೆಶಾ. 11:5). ಜೀವ ಹೋದರೂ ಪರವಾಗಿಲ್ಲ, ದೇವರೊಂದಿಗಿರುವ ನಂಬಿಗಸ್ಥಿಕೆಯನ್ನು ಕಾಪಾಡಿಕೊಳ್ಳಬೇಕು. "ಸತ್ಯವನ್ನು ಮಾರಬೇಡ ಕೊಂಡುಕೋ" (ಜ್ಞಾನೋ. 23:23).

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ1ದಾಸಿಯಾದ,
**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ
(ಅರಣ್ಯ. 6:26).

## ಪ್ರಾರ್ಥನಾ ಮನವಿಗಳು

- ದೇವರ ಮಕ್ಕಳು ಎಲ್ಲಾ ವಿಷಯಗಳಲ್ಲೂ ಪ್ರತಿಭಾವಂತರಾಗಿ ಬೆಳಗಲು– (ಯೆಶಾ. 54:13).
- ದೇವ ಮಕ್ಕಳ ಪ್ರತಿ ಕುಟುಂಬದಲ್ಲೂ ದೇವಪ್ರೀತಿ ಸುರಿಸಲ್ಪಡುವಂತೆ (ರೋಮ. 5:5).
- ದೇವ ಮಕ್ಕಳ ಭವಿಷ್ಯಕ್ಕಾಗಿ, ಅವರ ಆರೋಗ್ಯಕ್ಕಾಗಿ, ಒಳ್ಳೆಯ ಗುಣ ನಡತೆಗಳಿಗಾಗಿ, ದೇವ ಜ್ಞಾನದಲ್ಲೂ, ಭಯದಲ್ಲೂ ಬೆಳೆಯಲು ಪ್ರಾರ್ಥಿಸಿರಿ.
- ಭಾರತ ದೇಶದಲ್ಲಿ ಕರ್ತನ ನಾಮದ ಮಹಿಮೆಗಾಗಿ ಶ್ರಮಿಸುತ್ತಿರುವ ಪ್ರತಿಯೊಬ್ಬ ದೇವ ಸೇವಕರುಗಳಿಗಾಗಿ, ಪ್ರತಿಯೊಂದು ಸಂಸ್ಥೆಗಳಿಗಾಗಿ, ಸಭೆಗಳಿಗಾಗಿ, ಮಾಧ್ಯಮ ಸೇವೆ, ಕರಪತ್ರಗಳ ಸೇವೆ, ವೆಬ್‌ಸೆಟ್ ಸೇವೆ, ಟಿ.ವಿ ಹಾಗೂ ರೇಡಿಯೋಗಳ ಮೂಲಕ ನಡೆಯುವ ಸೇವೆ, ಇಂಟರ್‌ನೆಟ್, ಮೊಬೈಲ್‌ಗಳ ಮೂಲಕ ನಡೆಯುವ ಸೇವೆ ಹಾಗೂ ಪತ್ರಿಕೆ ಸೇವೆಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸೋಣ.
- ಕರ್ನಾಟಕದ ಉಜ್ಜೀವನಕ್ಕಾಗಿ 30 ಜಿಲ್ಲೆಗಳ ಹೆಸರುಗಳನ್ನು ಹೇಳಿ ಪ್ರಾರ್ಥಿಸೋಣ.
- ಕರ್ತನ ಸೇವೆಗಾಗಿ ಅನೇಕ ಸುವಾರ್ತಿಕರು ಎದ್ದೇಳುವಂತೆ ನಶಿಸಿ ಹೋಗುತ್ತಿರುವ ಆತ್ಮಗಳನ್ನು ಕ್ರಿಸ್ತನ ರಾಜ್ಯಕ್ಕಾಗಿ ಗೆಲ್ಲುವಂತೆ ಕ್ರಿಸ್ತನ ಪಾದದಲ್ಲಿ ಭಿನ್ನವಿಸೋಣ.
- ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ವಿಶಾಲತೆಗೆ ನಡೆಸುವಂತೆ ಪ್ರಾರ್ಥಿಸಿರಿ.

## ಡಿಜಿಎಮ್ ಬೇತೇಲ್ ಅಂಕಣ

- ಸಹೋ॥ ಪ್ರವೀಣ್ ಹಾಗೂ ಸಹೋ॥ ಸಮೀರಾರವರಿಗೆ ದೇವರು ದಾನವಾಗಿ ಅನುಗ್ರಹಿಸಿದ ಗಂಡು ಮಗುವಿಗೆ ಶೈನ್ ಬ್ಲೆಸಿಂಗ್ ಎಂದು ನಾಮಕರಣ ಮಾಡಲಾಯಿತು.
- 7ನೇ ಕೆರೀತ್ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು. ಈ ಕೂಟದಲ್ಲಿ ಅನೇಕರು ಭಾಗವಹಿಸಿ ಕರ್ತನಿಂದ ಆಶೀರ್ವಾದವನ್ನು, ಬಿಡುಗಡೆಯನ್ನು ಹೊಂದಿಕೊಂಡಿದ್ದಾರೆ.
- ಡಿಜಿಎಮ್ ಬೇತೇಲ್ ಸಭಾಪಾಲಕರಾದ ಪಾ॥ ಸುನಿಲ್ ಜಾನ್ ಡಿ'ಸೋಜಾರವರು ಕರ್ತನ ಕೃಪೆಯಿಂದ ವಿದೇಶದಲ್ಲಿ ಸೇವೆ ಮುಗಿಸಿ ಹಿಂದಿರುಗಿದ್ದಾರೆ.

## ವರ ಬೇಕಾಗಿದ್ದಾರೆ

ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿರುವ 5.6 ಅಡಿ ಎತ್ತರದ ವಧುವಿಗೆ (ಕಂಪ್ಯೂಟರ್ ಡಿಪ್ಲೋಮ್ ಮುಗಿಸಿ, ಸೇವೆಯಲ್ಲಿರುವ) ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿದ, ಸೇವೆ ಹಾಗೂ ಕೆಲಸದಲ್ಲಿರುವ 5.7 ಅಡಿ ಎತ್ತರದ ವರ ಬೇಕಾಗಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**9902334941, 0820 2002781.**

ನಿಮ್ಮನ್ನೂ, ನಮ್ಮನ್ನೂ ಒಂದುಮಾಡಿದವನಾದ ಆತನೇ ನಮಗೆ ಸಮಾಧಾನ ಕರ್ತೃವಾಗಿದ್ದಾನೆ (ಎಫೆ. 2:14).

# ಕವನಗಳು

ಜೀವನದಲ್ಲಿ ಸಂಕಷ್ಟದ ದಿನಗಳು
ಬರುತ್ತಿದೆ ಪುನ: ಪುನ:,
ಆದಾಗ್ಯೂ ಸುಖದ ಸಂವತ್ಸರಗಳು
ಕಾದಿದೆ ದೊಡ್ಡ ನದಿಯ ತರಹ.

ನಿನ್ನ ಕೈ ಹಿಡಿದಿರುವೆ
ನಿನ್ನನ್ನೇ ನೋಡುತ್ತಿರುವೆ
ನಿನ್ನಲ್ಲೇ ಅಂಗಲಾಚಿ ಬೇಡುವೆ
ಏಕೇಂದ್ರೆ ನಿನ್ನ ಬಿಟ್ರೆ ನನಗಾರು ಇಲ್ಲವೆ!

ಅಪ್ಪ ನಿನ್ನ ಪಾದದಲ್ಲಿ ಕುಳಿತು
ನಿನ್ನ ರೆಕ್ಕಗಳಡಿಯಲ್ಲಿ ಅವಿತು
ಹರ್ಷಿಸಿ ನಲಿಯುವೆನು,
ಎಲ್ಲಾ ಕಷ್ಟಗಳನ್ನು ಮರೆತು

ನಾ ಯೇಸುವಿನ ನಿವಾಸ
ನನ್ನ ಹೃದಯವೇ ಆತನ ಆವಾಸ
ನೀನ್ನಿಲ್ಲದ ಬದುಕು ನೀರಸ
ಆದುವೇ equal to ಕಸ.

**ಸಹೋ|| ದೀಪ್ತಿ,** ಮಂಗಲ.

# ನಗೆಹನಿಗಳು

ಸೇಲ್ಸ್‌ಮ್ಯಾನ್ : ಸಾರ್.. ನಿಮ್ಗೆ ಈ ಪೌಡರ್ ಬೇಕಾ?
ತಿಮ್ಮ : ಇದು ಯಾರಿಗೆ ?
ಸೇಲ್ಸ್‌ಮ್ಯಾನ್ : ಇಲಿಗಳಿಗೆ ಸಾರ್.
ತಿಮ್ಮ : ಹಾಗಾದ್ರೆ ಬೇಡ. ಈವತ್ತು ಪೌಡರ್ ಕೊಟ್ರೆ ನಾಳೆ ಅವು ಲಿಪ್‌ಸ್ಟಿಕ್ ಕೇಳ್ಬಹುದು!

ಗೆಳೆಯ : ಏನಯ್ಯಾ? ಹೊಸ ಕಲರ್ ಟಿವಿಯನ್ನು ನೀರಿನಲ್ಲಿ ಮುಳುಗಿಸುತ್ತಿದ್ದೀಯಾ?
ಮಂಕ : ಕಲರ್ ಟಿವಿ ಅಲ್ವಾ? ಬಣ್ಣ ಬಿಡುತ್ತೋ ಇಲ್ವೋ ಅಂತ ಚೆಕ್ ಮಾಡ್ತಿದೀನಿ!

ಡಾಕ್ಟರ್ : ಹೇಳಿ ನಿಮ್ಮ ತೊಂದರೆ ಏನು ?
ರೋಗಿ : ನನ್ನ ಭವಿಷ್ಯದ ಬಗ್ಗೆ ಚಿಂತೆಯಾಗಿದೆ ಡಾಕ್ಟ್ರೆ
ಡಾಕ್ಟರ್ : (ಗಂಭೀರವಾಗಿ) ಇದಕ್ಕೆ ನಾನು ಒಂದು ವರ್ಷದ ಚಿಕಿತ್ಸೆ ಕೊಡಬೇಕಾಗುತ್ತದೆ. ಅದಕ್ಕೆ ತಿಂಗಳಿಗೆ ಸಾವಿರ ರೂಪಾಯಿ ಫೀಸು.
ರೋಗಿ : ಅದು ನಿಮ್ಮ ಭವಿಷ್ಯಕ್ಕಾಯ್ತು. ನನ್ನ ಭವಿಷ್ಯದ ಗತಿ ಏನು ಹೇಳಿ ?

## ಜಾಹಿರಾತು

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ಯೆಹೋವನು ನಿನ್ನ ಭರವಸಕ್ಕೆ ಆಧಾರನಾಗಿದ್ದು ನಿನ್ನ ಕಾಲು ಪಾಶಕ್ಕೆ ಸಿಕ್ಕದಂತೆ ನಿನ್ನನ್ನು ಕಾಪಾಡುವನು (ಜ್ಞಾನೋ. 3:26).